ಜುಲೈ-ಸೆಪ್ಟೆಂಬರ್ 2025

ಸಂಪುಟ : 7 ಸಂಚಿಕೆ : 3

# ಕೃಷಿವನ

ತ್ರೈಮಾಸಿಕ ವಾರ್ತಾಪತ್ರ

ಖಾಸಗಿ ಪ್ರಸಾರಕ್ಕಾಗಿ

IAFT Bengaluru



ಶ್ರೀಮತಿ ಕಮಲಮ್ಮರವರ ಕೃಷಿಅರಣ್ಯ ತೋಟ (ರೇಷ್ಮೆ, ತೆಂಗು ಹಾಗೂ ಬದುವಿನಲ್ಲಿ ತೇಗ) -ಪಣ್ಣೇದೊಡ್ಡಿ, ಕೊಪ್ಪ ಹೋಬಳಿ, ಮದ್ದೂರು ತಾಲೂಕು (ಚಿತ್ರ: ಸುಪ್ರಿಯ ಸಿ.ಎನ್.)

# ಪ್ರಮುಖ ಪರಿಸರ ಸಂಬಂಧಿತ ದಿನಗಳು: ಜೂನ್-ಸೆಪ್ಟೆಂಬರ್-2025

**ಅಂತರರಾಷ್ಟ್ರೀಯ ಮ್ಯಾಂಗ್ರೂವ್ ಪರಿಸರ ವ್ಯವಸ್ಥೆ ಸಂರಕ್ಷಣೆ ದಿನ - ಜುಲೈ 26**
ಧ್ಯೇಯವಾಕ್ಯ 2025 : ನಮ್ಮ ಭವಿಷ್ಯಕ್ಕಾಗಿ ಜೌಗು ಪ್ರದೇಶಗಳನ್ನು ರಕ್ಷಿಸುವುದು

**ವಿಶ್ವ ಪ್ರಕೃತಿ ಸಂರಕ್ಷಣಾ ದಿನ - ಜುಲೈ 28**
ಧ್ಯೇಯವಾಕ್ಯ 2025 : ಜನರು ಮತ್ತು ಸಸ್ಯಗಳನ್ನು ಸಂಪರ್ಕಿಸುವುದು, ವನ್ಯಜೀವಿ ಸಂರಕ್ಷಣೆಯಲ್ಲಿ ಡಿಜಿಟಲ್ ನಾವೀನ್ಯತೆಯನ್ನು ಅನ್ವೇಷಿಸುವುದು

**ಅಂತರರಾಷ್ಟ್ರೀಯ ಹುಲಿ ದಿನ - ಜುಲೈ 29**
ಧ್ಯೇಯವಾಕ್ಯ 2025 : ಸ್ಥಳೀಯ ಜನರು ಮತ್ತು ಸ್ಥಳೀಯ ಸಮುದಾಯಗಳನ್ನು ಹೃದಯದಲ್ಲಿಟ್ಟುಕೊಂಡು ಹುಲಿಗಳ ಭವಿಷ್ಯವನ್ನು ಸುರಕ್ಷಿತಗೊಳಿಸುವುದು

**ವಿಶ್ವ ಸಿಂಹ ದಿನ - ಆಗಸ್ಟ್ 10**
ಧ್ಯೇಯವಾಕ್ಯ 2025 : ಸಮುದಾಯ ನೇತೃತ್ವದ ಸಂರಕ್ಷಣೆ

**ವಿಶ್ವ ಆನೆ ದಿನ - ಆಗಸ್ಟ್ 12**
ಧ್ಯೇಯವಾಕ್ಯ 2025 : ಮಾತೃಪಕ್ಷಗಳು ಮತ್ತು ನೆನಪುಗಳು

**ರಾಷ್ಟ್ರೀಯ ಜೇನು ನೊಣ ದಿನ - ಆಗಸ್ಟ್ 15**
ಧ್ಯೇಯವಾಕ್ಯ 2025 : ಪ್ರಕೃತಿಯಿಂದ ಪ್ರೇರಿತವಾದ ಜೇನುನೊಣ ನಮ್ಮೆಲ್ಲರನ್ನೂ ಪೋಷಿಸುತ್ತದೆ

**ನೀಲಿ ಆಕಾಶಕ್ಕಾಗಿ ಶುದ್ಧ ಗಾಳಿಯ ಅಂತರರಾಷ್ಟ್ರೀಯ ದಿನ- ಸೆಪ್ಟೆಂಬರ್ 7**
ಧ್ಯೇಯವಾಕ್ಯ 2025 : ಗಾಳಿಗಾಗಿ ಸ್ಪರ್ಧಿಸು

**ಅಂತರರಾಷ್ಟ್ರೀಯ ಓಝೋನ್ ಪದರ ಸಂರಕ್ಷಣಾ ದಿನ - ಸೆಪ್ಟೆಂಬರ್ 16**
ಧ್ಯೇಯವಾಕ್ಯ 2025 : ವಿಜ್ಞಾನದಿಂದ ಜಾಗತಿಕ ಕ್ರಿಯೆಯವರೆಗೆ

**ವಿಶ್ವ ಜಲ ಮೇಲ್ವಿಚಾರಣಾ ದಿನ-ಸೆಪ್ಟೆಂಬರ್ 16**
ಧ್ಯೇಯವಾಕ್ಯ 2025 : ಹಿಮನದಿ ಸಂರಕ್ಷಣೆ

**ಶೂನ್ಯ ಹೊರಸೂಸುವಿಕೆ ದಿನ - ಸೆಪ್ಟೆಂಬರ್ 21**
ಧ್ಯೇಯವಾಕ್ಯ 2025 : ನಮ್ಮ ಗ್ರಹಕ್ಕೆ ವರ್ಷಕ್ಕೊಂದು ದಿನ ರಜೆ ನೀಡಿ

**ವಿಶ್ವ ಪರಿಸರ ಆರೋಗ್ಯ ದಿನ - ಸೆಪ್ಟೆಂರ್ 26**
ಧ್ಯೇಯವಾಕ್ಯ 2025 : ಶುದ್ಧ ಗಾಳಿ, ಆರೋಗ್ಯವಂತ ಜನರು

**ಅಂತರರಾಷ್ಟ್ರೀಯ ಆಹಾರ ನಷ್ಟ ಮತ್ತು ತ್ಯಾಜ್ಯ ಜಾಗೃತಿ ದಿನ - ಸೆಪ್ಟೆಂಬರ್ 29**
ಧ್ಯೇಯವಾಕ್ಯ 2025 : ಆಹಾರ ನಷ್ಟ ಮತ್ತು ವ್ಯರ್ಥವನ್ನು ಕಡಿಮೆ ಮಾಡಲು ಪಾಲುದಾರರ ಪ್ರಯತ್ನಗಳನ್ನು ವಿಸ್ತರಿಸುವುದು ಮತ್ತು ಬಲಪಡಿಸುವುದು

# ಜಾಹೀರಾತು ವಿವರಗಳು

## ಕೃಷಿವನ ವಾರ್ತಾಪತ್ರಿಕೆಯಲ್ಲಿ ಜಾಹೀರಾತು ನೀಡಲು ನಿಗದಿಪಡಿಸಿದ ದರಗಳು.

| ಕ್ರ.ಸಂ | ವಿಸ್ತೀರ್ಣ | ಕಪ್ಪು-ಬಿಳುಪು ದರ (ರೂ.ಗಳಲ್ಲಿ) | ವರ್ಣಮಯ ದರ (ರೂ.ಗಳಲ್ಲಿ) | ಅವಧಿ |
|---|---|---|---|---|
| 1 | 1/4 ಪುಟ | 2500/- | 5000/- | 1 ವರ್ಷ |
| 2 | 1/2 ಪುಟ | 5000/- | 10000/- | 1 ವರ್ಷ |
| 3 | 1 ಪುಟ | 10000/- | 20000/- | 1 ವರ್ಷ |

## ಸುಭಾಷಿತ

**ವೈಜ್ಞಾನಿಕ ಆವಿಷ್ಕಾರಗಳು**
**ಪ್ರಕೃತಿಯ ಲಯ ತಪ್ಪಿಸಿದರೆ**
**ಮಹಾ ಪ್ರಳಯ ನಿಶ್ಚಿತ.**

# ಕೃಷಿವನ

ತ್ರೈಮಾಸಿಕ ವಾರ್ತಾಪತ್ರ


**Volume: 7 Issue: 3**

**ಸಂಪುಟ: 7 ಸಂಚಿಕೆ: 3**



## ಸಂಪಾದಕೀಯ ಮಂಡಳಿ

**ಗೌರವ ಸಂಪಾದಕರು**

ಡಾ. ಎಸ್.ಸಿ.ವಿ. ರೆಡ್ಡಿ, ನಿರ್ದೇಶಕರು, ಕೆ.ಎಸ್.ಎಸ್.ಸಿ.ಎ(ನಿ)

**ಪ್ರಧಾನ ಸಂಪಾದಕರು**

ಶ್ರೀ ಎನ್.ಡಿ. ತಿವಾರಿ, ಭಾ.ಅ.ಸೇ(ನಿ)

**ಸಂಪಾದಕರು**

ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ(ನಿ)

**ಸದಸ್ಯರು**

ಡಾ. ಎಸ್. ರಮೇಶ್, ಭಾ.ಅ.ಸೇ(ನಿ)
ಶ್ರೀ ಎ. ಅಶ್ವಥಯ್ಯ, ಉ.ಅ.ಸಂ(ನಿ)
ಡಾ. ಎ.ಬಿ. ಪಾಟೀಲ, ರಜಿಸ್ಟ್ರಾರ್(ನಿ)
ಶ್ರೀ ಎನ್. ಶಿವರಾಜು, ಉ.ಅ.ಸಂ(ನಿ)
ಶ್ರೀ ಆರ್. ಆಂಜನೇಯರೆಡ್ಡಿ, ಪ್ರಗತಿಪರ ರೈತರು
ಶ್ರೀ ಮಲ್ಲೇಶ್ ಲಿಂಗಾಚಾರ್, ತಂತ್ರಜ್ಞರು
ಡಾ. ಚಂದ್ರಶೇಖರ್ ಬಿರಾದಾರ
ಡಾ. ಟಿ.ಆರ್. ಗುರುಪ್ರಸಾದ್



## ಕಚೇರಿ ವಿಳಾಸ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ)
ವನವಿಕಾಸ, ನೆಲಮಹಡಿ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560003
ದೂ: 080 23566126
Email: iaftbangalore@gmail.com
www.iaft.co.in


## ಮನವಿ

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯು (IAFT) 2013 ರಿಂದ ಬೆಂಗಳೂರು ಕೇಂದ್ರ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಸ್ಥೆಯಲ್ಲಿ ಕೃಷಿಅರಣ್ಯದಲ್ಲಿ ಆಸಕ್ತಿಯುಳ್ಳ ಅಖಿಲ ಭಾರತ ಸೇವೆಯ ಹಾಗೂ ಕರ್ನಾಟಕ ರಾಜ್ಯ ಸೇವೆಯ ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ನಿವೃತ್ತ ಅಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳು ಹಾಗೂ ಪ್ರಾಧ್ಯಾಪಕರು (ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ನಿವೃತ್ತ), ಪ್ರಗತಿಪರ ರೈತರು, ಕೈಗಾರಿಕೋದ್ಯಮಿಗಳು ಹಾಗೂ ತಂತ್ರಜ್ಞರು ಸದಸ್ಯರಾಗಿರುತ್ತಾರೆ. ಅನುಭವಿ ತಜ್ಞರನ್ನು ಹೊಂದಿರುವ ಈ ಸಂಸ್ಥೆಯು ಸರ್ಕಾರದ ಅರಣ್ಯ, ಕೃಷಿ, ತೋಟಗಾರಿಕಾ ಇಲಾಖೆ ಹಾಗೂ ರೈತರ ನಡುವೆ ಕೊಂಡಿಯಾಗಿ ಕೃಷಿಅರಣ್ಯ ಪ್ರೋತ್ಸಾಹಿಸಲು ತಾಂತ್ರಿಕ ಸಲಹೆ ಹಾಗೂ ಸಹಕಾರ ನೀಡುತ್ತಿದೆ. ಈ ಸಂಸ್ಥೆಗೆ ಸದಸ್ಯರಾಗಲು ಬಯಸುವವರು ಸಂಸ್ಥೆಯ ಜಾಲತಾಣ (www.iaft.co.in) ದಲ್ಲಿ ಲಭ್ಯವಿರುವ ಅರ್ಜಿ ನಮೂನೆಯ ಪ್ರತಿಯ ನಕಲು ಇಳಿಸಿ ಭರ್ತಿ ಮಾಡಿ, ನಿಗದಿತ ಸದಸ್ಯತ್ವ ಶುಲ್ಕವನ್ನು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ (IAFT) ಈ ಕೆಳಗಿನ ಬ್ಯಾಂಕ್ ಖಾತೆಗೆ ಚೆಕ್ ಅಥವಾ ಡಿಡಿ ಅಥವಾ ನೆಫ್ಟ್ (NEFT) ಮುಖಾಂತರ ಪಾವತಿಸಿ ಸಂಸ್ಥೆಯ ನಿಯಮಾವಳಿಯಂತೆ (Byelaws) ಸದಸ್ಯರಾಗಬಹುದು.

Canara Bank,
18th Cross, Malleshwaram,
Bengaluru.
Account Holder Name: IAFT
SB Account No: 04242010115100
IFSC: CNRB0010424

**ಡಾ. ಎಸ್. ರಮೇಶ್,** ಕಾರ್ಯದರ್ಶಿ

### ಪರಿವಿಡಿ


| ಕ್ರ.ಸಂ. | ಲೇಖನ | ಪುಟ |
|---|---|---|
| 1 | ವನ್ಯಜೀವಿಗಳು ಹಾಗೂ ಕೃಷಿಅರಣ್ಯ | 4 |
| 2 | ಕೃಷಿಅರಣ್ಯದಲ್ಲಿ ವಿವಿಧ ಅತಿಥೇಯ ಪ್ರಭೇಧಗಳೊಂದಿಗೆ ಶ್ರೀಗಂಧ ತೋಪು ಬೆಳೆಸಿದ ರೈತನ ಯಶೋಗಾಥೆ | 5 |
| 3 | ಸೀತಾಫಲ (Custard Apple) | 12 |


### ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆಯ ಸದಸ್ಯತ್ವ


| ಸದಸ್ಯತ್ವ ವಿವರ | ಶುಲ್ಕ (ರೂ.) |
|---|---|
| ಸಂಸ್ಥಾ ಸದಸ್ಯತ್ವ | 25,000.00 |
| ಪೋಷಕ ಸದಸ್ಯತ್ವ | 20,000.00 |
| ಆಜೀವ ಸದಸ್ಯತ್ವ | 5,000.00 |
| ರೈತ ಸದಸ್ಯತ್ವ | 2,000.00 |


Publisher: IAFT, Chief Editor: N.D. Tiwari, IFS (Retd), KRUSHIVANA, Quarterly News Letter, July-September 2025,
Printed By: S.K. Chandrashekar, Rathna Offset Printers, #120, 1st Main Road, Cauvery Nadhi Road, Brindavana Nagar, Bengaluru-560019

Volume: 7
Issue: 3

**ಸಂಪಾದಕೀಯ...**

# ವನ್ಯಜೀವಿಗಳು ಹಾಗೂ ಕೃಷಿಅರಣ್ಯ



ಎನ್.ಡಿ. ತಿವಾರಿ, ಭಾ.ಅ.ಸೇ (ನಿ)
**ಅಧ್ಯಕ್ಷರು**

ಪ್ರಂಪಂಚದಾದ್ಯಂತ ಹವಾಮಾನ ಬದಲಾವಣೆಯ ಪರಿಣಾಮಗಳು ಎಲ್ಲಾ ಕ್ಷೇತ್ರಗಳ ಮೇಲೂ ಗಂಭೀರ ಪರಿಣಾಮ ಉಂಟು ಮಾಡಿವೆ. ಜೊತೆಗೆ ಜನಸಂಖ್ಯಾ ಹೆಚ್ಚಳಕ್ಕನುಗುಣವಾಗಿ ನಾಗರೀಕ ಸೌಕರ್ಯಗಳನ್ನು ಕಲ್ಪಿಸುವ ನೆಪದಲ್ಲಿ ಅರಣ್ಯನಾಶ ಅವ್ಯಾಹತವಾಗಿ ನಡೆದಿದೆ. ಇದರ ಪರಿಣಾಮದಿಂದ ವನ್ಯಜೀವಿಗಳಿಗೆ ನೆಲೆ ಕಡಿಮೆಯಾಗಿ ಅಕ್ಕಪಕ್ಕದ ಕೃಷಿ ಭೂಮಿಗೆ, ಗ್ರಾಮಗಳಿಗೆ ನುಗ್ಗಿ ಬೆಳೆ ನಾಶ ಮತ್ತು ಆಸ್ತಿಪಾಸ್ತಿಗಳ ನಾಶ ಮುಂದುವರೆದಿದೆ. ಇತ್ತೀಚಿನ ದಿನಗಳಲ್ಲಿ ವನ್ಯಜೀವಿಗಳು ಅರಣ್ಯಗಳಿಂದ ಹೊರ ನಡೆಯದಂತೆ ನೋಡಿಕೊಳ್ಳಲು ಅರಣ್ಯ ಇಲಾಖಾ ಸಿಬ್ಬಂದಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಆದರೂ ಸಹ ವನ್ಯಜೀವಿ–ಮಾನವ ಸಂಘರ್ಷ ಕಡಿಮೆಗೊಳಿಸಲು ಸಾಧ್ಯವಾಗುತ್ತಿಲ್ಲ.

ಅರಣ್ಯ ಭೂಮಿಯ ಮೇಲಿನ ಒತ್ತಡ ಕೃಷಿಗಾಗಿಯಾದರೆ ಮತ್ತೊಂದೆಡೆ ಪ್ರವಾಸೋದ್ಯಮ ನೆಪದಲ್ಲಿ ಅರಣ್ಯಗಳ ಸುತ್ತಮುತ್ತ ನಾಯಿಕೊಡೆಗಳಂತೆ ರೆಸಾರ್ಟ್‌ಗಳು ತಲೆ ಎತ್ತಿರುವುದರ ಪರಿಣಾಮಗಳಿಂದ ವನ್ಯಜೀವಿಗಳಿಗೆ ನೆಮ್ಮದಿಯಿಲ್ಲದಂತಾಗಿದೆ. ಜೊತೆಗೆ ಅವುಗಳು ಸ್ವಾಭಾವಿಕವಾಗಿ ತಿರುಗಾಡುವ ದಾರಿಗಳನ್ನು ಬಂದ್ ಮಾಡಿರುವುದರಿಂದ, ಆಕ್ರೋಶಕ್ಕೊಳಗಾದ ವನ್ಯಜೀವಿಗಳು ದಾರಿಕಾಣದೆ ಕೃಷಿ ಭೂಮಿಗೆ ನುಗ್ಗಿ, ಕೃಷಿ ಬೆಳೆ ನಾಶ, ಮತ್ತೊಂದೆಡೆ ಗ್ರಾಮಗಳು ಹಾಗೂ ಸಮೀಪದ ಪಟ್ಟಣ ಪ್ರದೇಶಗಳನ್ನು ಸಹ ಬಿಟ್ಟಿರುವುದಿಲ್ಲ. ಇಂತಹ ಸನ್ನಿವೇಶಗಳು ಇಲಾಖೆಯ ನಿಯಂತ್ರಣಕ್ಕೆ ಸಿಗದೆ, ಅರಣ್ಯ ಇಲಾಖೆಗೆ ತಲೆನೋವಾಗಿ ಪರಿಣಮಿಸಿದೆ.

ವಾತಾವರಣವು ಎರಡು ವಿವಿಧ ರೀತಿಯ ಸಂಪನ್ಮೂಲಗಳನ್ನು ನಮಗೆ ಒದಗಿಸುತ್ತಿದೆ. ಅವುಗಳೆಂದರೆ, ಮಳೆ, ಗಾಳಿ, ಸೂರ್ಯನ ಬೆಳಕು. ಇವುಗಳು ಮಾನವನಿಗೆ ಉಪಕಾರಿಯಾಗಿರುತ್ತವೆ. ಹಾಗೂ ಮತ್ತೊಂದು ಬಗೆಯ ಸಂಪನ್ಮೂಲಗಳೆಂದರೆ ಮಾನವನಿಗೆ ಹಾನಿಯುಂಟು ಮಾಡುವ ಬಿರುಗಾಳಿ ಮತ್ತು ಬರಗಾಲದಂತಹ ಸನ್ನಿವೇಶಗಳನ್ನು ಸಹ ಪರಿಸರಕ್ಕೆ ಮತ್ತು ಸಮಾಜಕ್ಕೆ ನೀಡುತ್ತಿವೆ. ಹವಾಮಾನ ಬದಲಾವಣೆಯ ಮತ್ತೊಂದು ಗಂಭೀರ ಸ್ವರೂಪದ ಪರಿಣಾಮವೆಂದರೆ, ನೈಸರ್ಗಿಕ ಅರಣ್ಯಗಳಲ್ಲಿ ವನ್ಯ ಜೀವಿಗಳಿಗೆ ಆಹಾರವಿಲ್ಲದೆ ಕಳೆ ಜಾತಿಯ ಅಂದರೆ ಲಂಟಾನ ಮತ್ತು ಯುಪಟೋರಿಯಂನಂತಹ ಸಸ್ಯಗಳು ತಲೆ ಎತ್ತಿರುವುದರಿಂದ, ಸಸ್ಯಹಾರಿಗಳಿಗೆ ಸರಿಯಾದ ಪ್ರಮಾಣದಲ್ಲಿ ಆಹಾರ ದೊರೆಯುತ್ತಿಲ್ಲ. ಇದರಿಂದಾಗಿ ಸಹ ಆನೆಯಂತಹ ದೊಡ್ಡ ಗಾತ್ರದ ಸಸ್ಯಹಾರಿಗಳು ಅರಣ್ಯಗಳಿಂದ ಆಹಾರಕ್ಕಾಗಿ ಹೊರಬಂದು, ಕೃಷಿ ಬೆಳೆ ನಾಶ, ಆಸ್ತಿ ಪಾಸ್ತಿ, ನಾಶ ಮಾಡುತ್ತಿವೆ. ಇರುವ ಅರಣ್ಯ ಪ್ರದೇಶಗಳಲ್ಲಿ ಸಣ್ಣ ಸಣ್ಣ ಸಸ್ಯಹಾರಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಆಹಾರ ದೊರೆಯದೆ, ಇವುಗಳ ಸಂತತಿ ಸಹ ಕಡಿಮೆಯಾಗುತ್ತಿದೆ. ಇದರ ಪರಿಣಾಮದಿಂದ ಮಾಂಸಹಾರಿಗಳಾದ ಚಿರತೆ ಮತ್ತು ಹುಲಿಗಳು ಗ್ರಾಮಗಳಿಗೆ ಆಹಾರಕ್ಕಾಗಿ ಅರಸಿ ಬಂದು, ಸಾಕು ಪ್ರಾಣಿಗಳು ಮತ್ತು ಮಾನವನ ಜೀವಕ್ಕೆ ಹಾನಿ ಮಾಡುತ್ತಿವೆ.

ಇಂತಹ ಸಂದರ್ಭಗಳನ್ನು ಸ್ವಲ್ಪ ಮಟ್ಟಿಗಾದರು ಸರಿದೂಗಿಸಲು ಅರಣ್ಯಗಳ ಸುತ್ತಮುತ್ತಲಿನ ಖಾಸಗೀ ಜಮೀನುಗಳಲ್ಲಿ ಮರಗಳನ್ನು ಬೆಳೆಸುವುದರಿಂದ, ಸಸ್ಯಹಾರಿ ಪ್ರಾಣಿಗಳು ರೈತರ ಹೊಲಗದ್ದೆಗಳಿಗೆ ಭೇಟಿ ಕೊಟ್ಟಾಗ, ಅವುಗಳಿಗೆ ಕೃಷಿವನದಲ್ಲಿ ರೈತರು ಬೆಳೆಸಿರುವ ಮರಗಳು ಆಹಾರವಾಗಲಿವೆ ಹಾಗೂ ಇದರಿಂದ ಕೃಷಿ ಬೆಳೆಗಳಿಗೆ ರಕ್ಷಣೆಯಾಗಬಹುದು. ರೈತರು ಗಮನದಲ್ಲಿರಿಸಿಕೊಳ್ಳಬೇಕಾದ ಮತ್ತೊಂದು ವಿಚಾರವೆಂದರೆ ಅರಣ್ಯಗಳ ಸುತ್ತಮುತ್ತಲಿನ ಜಮೀನುಗಳಲ್ಲಿ ಆನೆ ಹಾಗೂ ಸಸ್ಯಹಾರಿ ವನ್ಯಜೀವಿ ಇಷ್ಟಪಡುವಂತ ಬೆಳೆಗಳನ್ನು ಬೆಳೆಯದಿರುವುದು ಸಹ ಕ್ಷೇಮಕರ.

ವನ್ಯಪ್ರಾಣಿಗಳು ಅನೇಕ ಕಾರಣಗಳಿಂದ ಅವುಗಳ ಸ್ವಾಭಾವಿಕ ವಾಸಸ್ಥಾನಗಳಿಂದ (ಅರಣ್ಯ) ಹೊರಬಂದು ಕೃಷಿ ಜಮೀನಿನ ಮೇಲೆ ದಾಳಿ ಮಾಡುತ್ತವೆ. ಇಲ್ಲಿ ಮೇವಿನ ಕೊರತೆಯಿಂದ ಸಸ್ಯಹಾರಿ ಪ್ರಾಣಿಗಳು ಹೊರಬರುತ್ತವೆ ಇದೇ ಮಾದರಿಯಲ್ಲಿ ಮಾಂಸಹಾರಿ ಪ್ರಾಣಿಗಗಳು ಸಹ ಸಾಕಷ್ಟು ಪ್ರಮಾಣದಲ್ಲಿ ಸಸ್ಯಹಾರಿ ಪ್ರಾಣಿಗಳು ದೊರೆಯದಿದ್ದಾಗ ಅದರಲ್ಲೂ ವಿಶೇಷವಾಗಿ ವಯಸ್ಸಾದ ಮಾಂಸಹಾರಿಗಳು ಸುಲಭವಾಗಿ ದೊರೆಯುವ ಆಹಾರವನ್ನು ನೋಡುತ್ತಿರುತ್ತವೆ. ಹಿಂದೆಲ್ಲಾ ಸಾಕಷ್ಟು ಮರಗಳಿಂದ ಕೂಡಿದ್ದ ಸರ್ಕಾರಿ ಸಾರ್ವಜನಿಕ ಭೂಮಿ ಮತ್ತು ಬೀಳು ಬಿಟ್ಟಿರುವ ಖಾಸಗೀ ಭೂಮಿ ಹೆಚ್ಚುವರಿಯಾಗಿ ಇರುತ್ತಿತ್ತು. ಆದರೆ, ಭೂಮಿಯ ಮೇಲಿನ ಒತ್ತಡ ಅತಿಯಾಗಿರುವುದರಿಂದ ಗಿಡಮರಗಳನ್ನು ತೆರವುಗೊಳಿಸಿ ಉಳುಮೆ ಮಾಡಲಾಗುತ್ತಿದೆ ಅಥವಾ ಪ್ರಕೃತಿ ಪ್ರವಾಸೋದ್ಯಮದ ನೆಪದಲ್ಲಿ ರೆಸಾರ್ಟ್‌ಗಳು ತಲೆ ಎತ್ತಿವೆ.

ಕೃಷಿಅರಣ್ಯವು ಕೃಷಿ ಕ್ಷೇತ್ರದ ಸಮಗ್ರ ಅಭಿವೃದ್ಧಿಯಲ್ಲಿ ವಿಶೇಷವಾಗಿ ಅರೆ ಮಲೆನಾಡು ಮತ್ತು ಪೂರ್ವ ಮೈದಾನ ಪ್ರದೇಶಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಲಿದೆ. ಕೃಷಿಅರಣ್ಯವು ಪುರಾತನ ಮತ್ತು ಸ್ವಾಭಾವಿಕ ಸಂಬಂಧಗಳು ಅರಣ್ಯ, ನೀರು ಮತ್ತು ಕೃಷಿಗೆ ಕಲ್ಪಿಸುವುದಾಗಿದೆ. ಭೂಮಿಯು ರೈತರಿಗಿರುವ ಬಹು ಮುಖ್ಯ ಸಂಪನ್ಮೂಲ. ಈ ಅತ್ಯಮೂಲ್ಯವಾದ ಸಂಪನ್ಮೂಲವನ್ನು ಸಂರಕ್ಷಣೆ ಮಾಡುವುದು ಅತ್ಯವಶ್ಯಕ. ಸುಸ್ಥಿರ ತೋಟದ ಬೆಳೆಗಳು/ಪ್ಲಾಂಟೇಶನ್ ಬೆಳೆಗಳ ಉತ್ಪಾದನೆಗೆ ಮಲೆನಾಡು ಭಾಗದಲ್ಲಿ ಹವಾಮಾನ ಬದಲಾವಣೆಯಿಂದ ಉಂಟಾಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಕೃಷಿಅರಣ್ಯಗಳು ಪ್ರಮುಖ ಪಾತ್ರ ವಹಿಸುತ್ತದೆ. ಕೃಷಿಅರಣ್ಯವು ಹವಾಮಾನ ವೈಪರೀತ್ಯಗಳನ್ನು ಉಪಶಮನಗೊಳಿಸುವುದರಿಂದ ಕೃಷಿ/ತೋಟಗಾರಿಕೆ/ಪ್ಲಾಂಟೇಶನ್ ಬೆಳೆಗಳ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ಎದುರಿಸಲು ಸಾಧ್ಯವಾಗಲಿದೆ. ಈ ಹಿಂದೆ ಪಶ್ಚಿಮ ಘಟ್ಟ ಪ್ರದೇಶಗಳ ಕಾಫಿ ತೋಟಗಳಲ್ಲಿ ಸ್ಥಳೀಯವಾದ ಮತ್ತು ದೀರ್ಘಕಾಲ ಬದುಕುವ ಮರಗಳನ್ನು ಬೆಳೆಯಲಾಗುತ್ತಿತ್ತು. ಇವುಗಳು ಅತಿಯಾದ ಮಳೆಗೆ ತಡೆಯೊಡ್ಡುವುದಲ್ಲದೆ, ಮಣ್ಣಿನ ರಕ್ಷಣೆ ಮತ್ತು ತಾಪಮಾನ ಶಮನಗೊಳಿಸಲು ಸಹಕಾರಿಯಾಗುತ್ತಿದ್ದವು. ಆದುದರಿಂದ ಸುಸ್ಥಿರ ಅಭಿವೃದ್ಧಿ ಸಾಧಿಸಲು ಕೃಷಿಅರಣ್ಯವು ಸಮಗ್ರ ಕೃಷಿ ಪದ್ಧತಿಗೆ ದಾರಿ ದೀಪವಾಗಿ ಸಂಪನ್ಮೂಲಗಳ ಸದ್ಬಳಕೆಗೆ ದಾರಿ ಮಾಡಿಕೊಡುವುದರಿಂದ, ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ, ಗಾಳಿ ಹಾಗೂ ವನ್ಯಜೀವಿಗಳ ಸುಸ್ಥಿರ ಸಂರಕ್ಷಣೆಗೆ ಹಾಗೂ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ.

**ವನ್ಯಜೀವಿ ಸಂರಕ್ಷಣೆ ನಮ್ಮೆಲ್ಲರ ಹೊಣೆ**

# ಕೃಷಿಅರಣ್ಯದಲ್ಲಿ ವಿವಿಧ ಅತಿಥೇಯ ಪ್ರಬೇಧಗಳೊಂದಿಗೆ ಶ್ರೀಗಂಧ ತೋಪು ಬೆಳೆಸಿದ ರೈತನ ಯಶೋಗಾಥೆ



**ಕೆ.ಎಮ್. ಗಾಮನಗಟ್ಟಿ,** ಉಪ ಅರಣ್ಯ ಸಂರಕ್ಷಣಾಧಿಕಾರಿ (ನಿ) ಮೊ: **94497 57708**

(2016 ರಿಂದ 2020 ರವರೆಗೆ ಬೀದರ್ ಸಾಮಾಜಿಕ ಅರಣ್ಯ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ.)

**ಕೃಷಿಕನ ಪರಿಚಯ:**

ಶ್ರೀ ಭಾನುದಾಸ ವೆಂಕಟರಾವ್ ಪಾಟೀಲ ರವರು ಅಖಿನಾಪುರ ಗ್ರಾಮದ ಔರಾದ್ ತಾಲ್ಲೂಕಿನ ಬೀದರ್ ಜಿಲ್ಲೆಯವರು. ಇವರು ಒಬ್ಬ ಪ್ರಗತಿಪರ ರೈತರಾಗಿದ್ದಾರೆ. 1972-75 ರಲ್ಲಿ ಪೂನಾ ವಿಶ್ವವಿದ್ಯಾಲಯದಲ್ಲಿ 4ನೇಯ ಶ್ರೇಣಿ (Rank) ಯೊಂದಿಗೆ ಬಿ.ಎಸ್ಸಿ ಪದವಿಯನ್ನು ಪಡೆದು, ಕುಟುಂಬದ ಹಿರಿಯ ಮಗನಾಗಿ, ಹಿರಿಯರ ಆಶಯದಂತೆ ಕೃಷಿ ವೃತ್ತಿಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಶ್ರೀಯುತರು 1975 ರಿಂದ ನಿರಂತರವಾಗಿ ಸಾಕಷ್ಟು ತೊಂದರೆಗಳನ್ನು ಎದುರಿಸಿದರೂ ಸಹ ಕೃಷಿ ವೃತ್ತಿಯಲ್ಲಿ ಮುಂದುವರೆದಿದ್ದಾರೆ. ಆ ಭಾಗದಲ್ಲಿ ಸಾಂಪ್ರದಾಯಿಕವಾಗಿ ಬೆಳೆಯುವ ತೊಗರಿ, ಹೆಸರು, ಉದ್ದು, ಸೋಯಾಬಿನ್ ಬೆಳೆಯುವುದರೊಂದಿಗೆ, 1975 ರಿಂದಲೂ ರೇಷ್ಮೆ ಬೆಳೆಯುವುದನ್ನು ಇಂದಿಗೂ ಮುಂದುವರೆಸಿದ್ದಾರೆ ಹಾಗೂ ಬೀದರ್ ಜಿಲ್ಲಾ ರೇಷ್ಮೆ ಬೆಳೆಗಾರರ ಸಂಘದ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ.

ಅನಿಯಮಿತ ಮಳೆಗಾಲ ಮತ್ತು ಕೂಲಿಕಾರರ ಸಮಸ್ಯೆಯಿಂದಾಗಿ, ಕೃಷಿ-ವೆಚ್ಚ ಏರುಮುಖವಾಗುತ್ತಿರುವುದರಿಂದ, ಕೃಷಿಅರಣ್ಯ ಬೆಳೆಸಲು ತೀರ್ಮಾನಿಸಿದರು. ಇದರೊಂದಿಗೆ ಕರ್ನಾಟಕ ಸರ್ಕಾರವು ಶ್ರೀಗಂಧದ ಕಾನೂನು & ನಿಯಮಾವಳಿಗಳಲ್ಲಿ ಬದಲಾವಣೆ ತಂದಿದ್ದರಿಂದ ಶ್ರೀಗಂಧ-ತೋಪುಗಳನ್ನು ಬೆಳೆಯಲು ಪೂರಕವಾಗಿರುತ್ತದೆ. ಶ್ರೀ ಭಾನುದಾಸರವರು ರಾಜ್ಯದಲ್ಲೆಡೆ ಸುತ್ತಾಡಿ ರೈತರನ್ನು ಭೇಟಿಯಾಗಿ ಶ್ರೀಗಂಧ-ತೋಪುಗಳನ್ನು ನೋಡಿ ಅಭ್ಯಸಿಸಿ, ಚರ್ಚಿಸಿ ಮಾಹಿತಿ ಪಡೆದುಕೊಂಡು, ತಮ್ಮ ಕೃಷಿ ಜಮೀನಿನಲ್ಲಿ ಶ್ರೀಗಂಧ-ತೋಪುನ್ನು ವಿವಿಧ ಅತಿಥೇಯ (Host species) ಪ್ರಬೇಧಗಳೊಂದಿಗೆ ಬೆಳೆಸಲು ತೀರ್ಮಾನಿಸಿದರು.

ಸದರಿಯವರು ಎರಡು ಮಾದರಿಗಳಾದ 1) ಟ್ರಂಚ್ ಮಾದರಿ 2) ಗುಂಡಿ ಮಾದರಿಯಲ್ಲಿ ಶ್ರೀಗಂಧ ತೋಪನ್ನು ಬೆಳೆಸಿದ ಮಾಹಿತಿಯನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

| ಕ್ರ. ಸಂ | ಕೃಷಿಕನ ಮಾಹಿತಿ | ವಿವರಣೆ |
|---|---|---|
| 1 | 2 | 3 |
| 1 | ಕೃಷಿಕನ ಹೆಸರು & ವಿಳಾಸ | ಶ್ರೀ ಭಾನುದಾಸ ವೆಂಕಟರಾವ್ ಪಾಟೀಲ ಮುಕ್ಕಾಂ - ಅಖಿನಾಪುರ, ಅಂಚೆ - ಚಿಕ್ಲಿ (ಯು) ತಾಲೂಕು - ಕಮಲನಗರ ( ಔರಾದ್) ಜಿಲ್ಲೆ- ಬೀದರ್ ಮೊಬೈಲ್ ಸಂಖ್ಯೆ - 1) 9731952274 ಮತ್ತು 9764617762. |
| 2 | ಕೃಷಿ ಜಮೀನಿನ ವಿವರ | ಸರ್ವೆ ಸಂಖ್ಯೆ - 15,20,22 ವಿಸ್ತೀರ್ಣ - 32 ಎಕರೆ (12.6 ಹೆ). |
| 3 | ಜಿ.ಪಿ.ಎಸ್. ವಿವರ | N - 77.272076 E - 18.385826 |
| 4 | ಮಣ್ಣಿನ ವಿಧ | ಕಪ್ಪು ಮಣ್ಣು |
| 5 | ಮಳೆಯ ಪ್ರಮಾಣ | ವಾರ್ಷಿಕ 500-600 ಮಿ.ಮೀ. |
| 6 | ತಾಪಮಾನ | 25-36 ಡಿಗ್ರಿ ಸೆಂಟಿಗ್ರೇಡ್, ಬೇಸಿಗೆ ಕಾಲದಲ್ಲಿ 42 ಡಿಗ್ರಿ ಸೆಂಟಿಗ್ರೇಡ್‌ವರೆಗೆ ಏರುತ್ತದೆ. |
| 7 | ನೆಡುತೋಪು ಬೆಳೆಸುವದಕ್ಕಾಗಿ ಭೂಮಿಯ ಸಿದ್ದತೆ | 1) ಭೂ ಮೇಲ್ಮೈ ಲಕ್ಷಣ ಹೆಚ್ಚು ಇಳಿಜಾರು ಪ್ರದೇಶವಾಗಿರುವದರಿಂದ ಟ್ರಂಚ್ ಪದ್ಧತಿಯನ್ನು ಅನುಸರಿಸಲಾಗಿದೆ. 2) ಜೆಸಿಬಿ ಯಂತ್ರದ ಸಹಾಯದಿಂದ 4ಮೀ X 0.60ಮೀ X 0.60 ಮೀ ಅಳತೆಯ ಟ್ರಂಚ್‌ಗಳನ್ನು ಅಕ್ಟೋಬರ್-ನವೆಂಬರ್ 2015ರಲ್ಲಿ ತೆಗೆಯಲಾಗಿದೆ. |
| 8 | ಟ್ರಂಚ್ ಸಾಲುಗಳ ನಡುವಿನ ಅಂತರ | 4 ಮೀಟರ್ ಉದ್ದ X 3.5 ಮೀಟರ್ ಅಂತರ |
| | ಪ್ರತಿ ಹೆಕ್ಟೇರಿಗೆ ಟ್ರಂಚ್‌ಗಳು | 714 ಟ್ರಂಚ್/ಹೆ. |
| | ಒಟ್ಟು ಟ್ರಂಚ್‌ಗಳು | 8800 ಸಂಖ್ಯೆ |
| | ನೆಟ್ಟ ಸಸಿಗಳ ಮೂಲ | 1) ಶ್ರೀಗಂಧ - ಶ್ರೀ. ರಮೇಶ್ ಬಳೂಟಗಿ, ಕುಷ್ಟಗಿ ಇವರ ಸಸ್ಯಕ್ಷೇತ್ರದಿಂದ |
| | | 2) ಕಸಿ ಸೀತಾಫಲ - ಬಾರ್ಸಿಯ ಖಾಸಗಿ ಸಸ್ಯಕ್ಷೇತ್ರದಿಂದ |
| | | 3) ಮಲಬರಿ ಕಡ್ಡಿ-ಜಿ1 ಮಾದರಿ, ಅವರೇ ಬೆಳೆದದ್ದು |
| | | 4) ಹೆಬ್ಬೇವು - ಸಾಮಾಜಿಕ ಅರಣ್ಯ ವಲಯ ಔರಾದ್ (ಬೋರಾಳ ಸಸ್ಯಕ್ಷೇತ್ರ) |

**9 — ಗೊಬ್ಬರ ಪೂರೈಕೆ & ನೆಟ್ಟ ಸಸಿಗಳ ಸಂಖ್ಯೆ (ಪ್ರತಿ ಟ್ರೆಂಚ್‌ನಲ್ಲಿ 4 ಸಸಿಗಳು 1 ಮೀಟರ್ ದೂರದಲ್ಲಿ)**

| ಕ್ರ.ಸಂ. | ಪ್ರಬೇಧ | ಸಸಿಗಳ ಸಂಖ್ಯೆ | ಸರಾಸರಿ ಕಾಂಡ ಸುತ್ತಳತೆ (ಸೆಂ.ಮೀ) | ಸರಾಸರಿ ಎತ್ತರ ಸೆಂ.ಮೀ (ಶೇ.1 ರಂತೆ) |
|---|---|---|---|---|
| 1 | ಕಸಿ ಸೀತಾಫಲ | 8800 | 3.0 | 50 |
| 2 | ಮಲಬರಿ ರೇಷ್ಮೆ | 8800 | 2.0 | 60 |
| 3 | ಶ್ರೀಗಂಧ | 8800 | 1.5 | 45 |
| 4 | ಹೆಬ್ಬೇವು | 8800 | 4.0 | 90 |
| | ಒಟ್ಟು | 35200 | | |

ಸಸಿ ನೆಡುವ ಪೂರ್ವದಲ್ಲಿ ಪ್ರತಿ ಸಸಿಗೆ ಅಂದಾಜು 2 ಕಿಲೋದಂತೆ ಕೊಟ್ಟಿಗೆ ಗೊಬ್ಬರ ಹಾಕಿ ನೆಡಲಾಗಿದೆ.

**10 — ಸಸಿ ನೆಟ್ಟ ಅವಧಿ**

1) 2016 ಜನವರಿ ತಿಂಗಳಿನಲ್ಲಿ – ಶ್ರೀಗಂಧ, ಕಸಿ ಸೀತಾಫಲ, ಮಲಬರಿ/ ರೇಷ್ಮೆ, ಇವುಗಳನ್ನು ನೆಡಲಾಗಿದೆ.
2) 2016 ಜುಲೈ ತಿಂಗಳಿನಲ್ಲಿ ಹೆಬ್ಬೇವು ನೆಡಲಾಗಿದೆ.

**11 — ನೀರಾವರಿ ಸೌಲಭ್ಯ**

ಸಸಿಗಳನ್ನು ನೆಟ್ಟ ತಕ್ಷಣವೆ ಹನಿ ನೀರಾವರಿ (ಡ್ರಿಪ್ ಇರಿಗೇಶನ್) ಸೌಲಭ್ಯ ಒದಗಿಸಲಾಗಿದೆ.

**12 — ನೆಡುತೋಪಿನ ರಕ್ಷಣಾ ವ್ಯವಸ್ಥೆ**
1. ತಂತಿಬೇಲಿ
2. ಸೋಲಾರ್ ಬೇಲಿ
3. ಸಿಸಿ ಕ್ಯಾಮರಾ
4. ನಾಯಿಗಳ ತಂಡ


1. **ತಂತಿ ಬೇಲಿ** – ಕೃಷಿ ಜಮೀನಿನ ಸುತ್ತಲೂ ಕೃಷಿ ಬೆಳೆಗಾಗಿ ನಿರ್ಮಿಸಿದ್ದ ಭಾಗಶಃ ಮುಳ್ಳುತಂತಿ ಬೇಲಿಯನ್ನೇ ಮುಂದುವರೆಸಲಾಗಿದೆ. ಇಲ್ಲಿಯವರೆಗೆ ಶ್ರೀಗಂಧ ತೋಪಿನ ರಕ್ಷಣೆಗೆ ಎಂದೇ ಯಾವುದೇ ಬೇಲಿ ನಿರ್ಮಿಸಿರಲಿಲ್ಲ. 8–10 ವರ್ಷದವರೆಗೆ ಶ್ರೀಗಂಧ ಮರಗಳ ರಕ್ಷಣೆಗಾಗಿ ಬೇಲಿ ಅತಿ ಅವಶ್ಯಕವಿಲ್ಲ.
2. **ಸೋಲಾರ್ ಬೇಲಿ** – ಈ ವರ್ಷ (2025 ರಲ್ಲಿ) ಸೋಲಾರ್ ಬೇಲಿ ನಿರ್ಮಿಸುವುದಕ್ಕೆ ಎಲ್ಲ ಏರ್ಪಾಡನ್ನು ಮಾಡಿಕೊಳ್ಳಲಾಗುತ್ತಿದೆ. ಪೂರ್ವ ಸಿದ್ಧತೆಯಾಗಿ ಸಿಮೆಂಟ್ ಕಂಬಗಳನ್ನು ನಮ್ಮ ಈ ಶ್ರೀಗಂಧ ತೋಪಿನಲ್ಲಿಯೇ 2.75 ಮೀಟರ್ (9 ಫೂಟ್) ಎತ್ತರದ ಆರ್.ಸಿ.ಸಿ ಕಂಬಗಳನ್ನು ನಿರ್ಮಿಸಲಾಗುತ್ತಿದ್ದು (2.75ಮೀ X 0.15ಮೀ X 0.13ಮೀ. ರೂ. 400/ ಒಂದಕ್ಕೆ ವೆಚ್ಚವಾಗಿದೆ), ಸೋಲಾರ್ ಬೇಲಿಯನ್ನು ನಿರ್ಮಿಸುವುದಕ್ಕೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

   ಈ ವರ್ಷದಲ್ಲಿ (2025 ರಲ್ಲಿ) ಸೋಲಾರ್ ಬೇಲಿಯನ್ನು ನಿರ್ಮಿಸಿ ಪೂರ್ಣಗೊಳಿಸಲಾಗುವುದು.

   ಶ್ರೀಗಂಧ ಗಿಡಗಳು 9–10 ವರ್ಷ ವಯಸ್ಸಿನ ಮರಗಳಾಗಿ ಬೆಳೆಯುತ್ತಿದ್ದು, ಚೇಗು (ಕೆಚ್ಚು/Heart-wood formation) ಕೆಲವು ಮರಗಳಲ್ಲಿ ಪ್ರಾರಂಭವಾಗುತ್ತಿರುವದು ಕಂಡು ಬರುತ್ತಿದೆ. (ತೊಗಟೆ ಚೌಕಾಕಾರವಾಗಿ ಸೀಳುತ್ತಿರುವುದು ಚೇಗು ಬೆಳವಣಿಗೆ ಪ್ರಾರಂಭವಾಗುತ್ತಿರುವುದರ ಸಂಕೇತ) ಆದ್ದರಿಂದ ಈಗ ಶ್ರೀಗಂಧ ಮರಗಳ ರಕ್ಷಣೆಗಾಗಿ ತಂತಿಬೇಲಿ ಅವಶ್ಯಕವಾಗಿದೆ.
3. **ಸಿ.ಸಿ.ಕ್ಯಾಮರಾ ಅಳವಡಿಕೆ** – ಪ್ರಾಯೋಗಿಕವಾಗಿ ಸೌರಶಕ್ತಿ & ಮೊಬೈಲ್ ಮೂಲಕ ನಿಯಂತ್ರಿತ ಎರಡು ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲಾಗಿದೆ ಹಾಗೂ ಚನ್ನಾಗಿ ಕಾರ್ಯ ನಿರ್ವಹಿಸುತ್ತಿವೆ.
4. **ನಾಯಿಗಳ ಸಂಚಾರಿ ತಂಡ** – ಹರಿಯಾಣ ರಾಜ್ಯ ಮೂಲದಿಂದ, ಔರಂಗಾಬಾದಿನ ಮಧ್ಯವರ್ತಿ ಮೂಲಕ, **ಇಂಡಿಯನ್ ಮ್ಯಾಸ್ಟಿಫ್ (Indian Mastiff),** ಪ್ರಬೇಧದ ಒಂದು ಜೊತೆ ನಾಯಿಗಳನ್ನು (ಗಂಡು+ಹೆಣ್ಣು) ರೂ. 50,000/– ಕೊಟ್ಟು ಮೂರು ವರ್ಷಗಳ ಹಿಂದೆ (2021ರಲ್ಲಿ) ಖರೀದಿಸಲಾಗಿದೆ. ಈ ನಾಯಿಗಳು ವಾಸನೆಯನ್ನು ಗ್ರಹಿಸುವಲ್ಲಿ ಕುಶಲತೆಯನ್ನು ಹೊಂದಿವೆ. ರಾತ್ರಿ ಹೊತ್ತು ನೆಡುತೋಪಿನಲ್ಲಿ ಓಡಾಡಿ ಗಸ್ತು ತಿರುಗುವುದಕ್ಕೆ ತೊಡಗಿಸಲಾಗಿದೆ. ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತವೆ. ಈ ಒಂದು ಜೊತೆ ನಾಯಿಗಳು ಈ ಕೆಳಗಿನಂತೆ ಮರಿಗಳಿಗೆ ಜನ್ಮ ನೀಡಿವೆ.

| ಸಂ. | ವರ್ಷ | ಜನ್ಮ ನೀಡಿದ ನಾಯಿ ಮರಿಗಳ ಸಂಖ್ಯೆ | ಬದುಕುಳಿದ ನಾಯಿ ಮರಿಗಳ ಸಂಖ್ಯೆ | ಸಂಬಂಧಿಕರಿಗೆ ಮತ್ತು ಸ್ನೇಹಿತರಿಗೆ ನೀಡಿದ್ದು | ಮಾರಾಟ ಮಾಡಿದ್ದು |
|---|---|---|---|---|---|
| 1 | 2022 | 17 | 14 | 7 | 7 |
| 2 | 2023 | 14 | 11 | 5 | 6 |
| 3 | 2024 | 9 | 5 | – | 5 |

12 ಅಂತರ ಬೆಳೆಯನ್ನು ಬೆಳೆಯುತ್ತಿರುವ ವಿವರ ಮತ್ತು ಆದಾಯದ ವಿವರ




1) ಕಸಿ ಸೀತಾಫಲ 2) ರೇಷ್ಮೆ 3) ಶ್ರೀಗಂಧ 4) ಹೆಬ್ಬೇವು ಇವುಗಳನ್ನು 1 ಮೀಟರ್ ಅಂತರದ ಟ್ರಂಚ್‌ನಲ್ಲಿ ನೆಡಲಾಗಿದೆ.

**(ಅ)** 3.5 ಮೀ. ಅಂತರದಲ್ಲಿಯ ಎರಡು ಟ್ರಂಚ್ ಸಾಲುಗಳ ಮಧ್ಯದಲ್ಲಿ 1.75 ಮೀ ದೂರದಲ್ಲಿ ಅಂದಾಜು 10.00 ಎಕರೆ (4 ಹೆ.) ವಿಸ್ತೀರ್ಣದಲ್ಲಿ ಏರು ಮಡಿಗಳನ್ನು ಮಾಡಿ, ಗ್ರೀನ್ ಬೆರ್ರಿ & ತೈವಾನ್ ವಿಧದ ಪಪ್ಪಾಯಾ ಸಸಿಗಳನ್ನು ನೆಟ್ಟು ಈ ಬೆಳೆಗೂ ಹನಿ ನೀರಾವರಿ ಸೌಲಭ್ಯ ಒದಗಿಸಿ ಎರಡು ವರ್ಷಗಳವರೆಗೆ ನಿರ್ವಹಿಸಿ ಎಲ್ಲಾ ವೆಚ್ಚ ಕಳೆದು **ರೂಪಾಯಿ 10.00 ಲಕ್ಷ ಲಾಭವನ್ನು ಪಪ್ಪಾಯ ಬೆಳೆಯಿಂದ ಪಡೆದುಕೊಂಡಿರುತ್ತಾರೆ.**

**(ಆ)** ಉಳಿದ 22 ಎಕರೆ ವಿಸ್ತೀರ್ಣದಲ್ಲಿ ನಿರಂತರವಾಗಿ 5 ವರ್ಷಗಳವರೆಗೆ (2021ರವರೆಗೆ) ಅಂತರ ಬೆಳೆಯಾಗಿ ತೊಗರಿ, ಹೆಸರು, ಉದ್ದು, ಸೋಯಾಬಿನ್, ಈರುಳ್ಳಿ ಬೆಳೆದಿರುತ್ತಾರೆ. ಇದರಿಂದ ಬಂದ ಆದಾಯವನ್ನು ಕೃಷಿಅರಣ್ಯ ತೋಪಿನ ನಿರ್ವಹಣಾ ವೆಚ್ಚವಾದ ಕಳೆ ತೆಗೆಯುವುದು, ಮಣ್ಣು ಸಡಿಲಿಸುವುದು, ನೀರಾವರಿ ನಿರ್ವಹಣೆ ವೆಚ್ಚ ಭರಿಸಲು ಬಹಳಷ್ಟು ಅನುಕೂಲವಾಗಿದೆ. 2017 ರಿಂದ ಕಳೆದ ಸಾಲಿನವರೆಗೆ ಅಂತರ ಬೆಳೆ ಬೆಳೆದ ವಿವರ. ಸಸಿಗಳನ್ನು ನೆಟ್ಟ ನಂತರ, ಅಂತರ ಬೆಳೆ ಬೆಳೆಯುವುದಕ್ಕೆ ಶೇ.50–60 ನಿವ್ವಳ ಕ್ಷೇತ್ರ ಲಭ್ಯವಾಗುತ್ತದೆ.

| ಸಂ. | ವರ್ಷ & ತಿಂಗಳು | ಬೆಳೆದ ಬೆಳೆ | ಇಳುವರಿ ಕ್ವಿಂ | ದರ/ಕ್ವಿಂ | ಪಡೆದ ನಿವ್ವಳ ಲಾಭ |
|---|---|---|---|---|---|
| 1 | 2016 & 2017 | ಪಪ್ಪಾಯ | | | 10,00,000/– |
| 2 | 2017 ಜೂನ್ | ಸೋಯಾ & ತೊಗರಿ | 150 | 4000/– | 6,00,000/– |
| 3 | 2018 ಜೂನ್ | ಸೋಯಾ | 120 | 4500/– | 5,40,000/– |
| 4 | | ತೊಗರಿ | 50 | 8000/– | 4,00,000/– |
| 5 | 2019 | ಬರಗಾಲದಿಂದಾಗಿ, ಯಾವುದೇ ಬೆಳೆ ಬೆಳೆದಿಲ್ಲ | | | |
| 6 | 2020 & 2021 | ಪಪ್ಪಾಯ | | | 15,00,000/– |
| 7 | 2022 | ಸೋಯಾ, ಶೇಂಗಾ, ಗೋಧಿ | | | 3,00,000/– |
| 8 | 2023 | ಯಾವುದೇ ಬೆಳೆ ಬೆಳೆದಿಲ್ಲ ಕೇವಲ ಮೇವು ಬೆಳೆದಿರುವದು. | | | |
| 9 | 2024 | ಗೋಧಿ & ಶೇಂಗಾ | | | 1,00,000/– |

(ಇ) ಈಗ ಕಳೆದೆರಡು ವರ್ಷಗಳಿಂದ (2023 ರಿಂದ) ಗಿಡಗಳ ಹಂದರ ದಟ್ಟವಾಗಿರುವ ಸ್ಥಳ ಹೊರತುಪಡಿಸಿ ಉಳಿದ ಸ್ಥಳಗಳಲ್ಲಿ ಅಂತರ ಬೆಳೆಯನ್ನು ಬೆಳೆಯಲಾಗುತ್ತಿದೆ. 2024ನೆಯ ಸಾಲಿನಲ್ಲಿ ಈರುಳ್ಳಿಯನ್ನು ಅಂತರ ಬೆಳೆಯಾಗಿ ಬೆಳೆಯಲಾಗಿತ್ತು.

(ಈ) ಈ ಎಲ್ಲಾ ಅವಧಿಯಲ್ಲಿ ಅಂತರ ಬೆಳೆಗಳಿಗೆ ತುಂತುರು ಹನಿ ನೀರಾವರಿ ಸೌಲಭ್ಯ ಒದಗಿಸಲಾಗಿತ್ತು.

(ಉ) ಅಂತರ ಬೆಳೆಗಳಿಗಾಗಿ ಭೂಮಿ ಉಳುಮೆ ಮಾಡುತ್ತಿರುವುದು ಹಾಗೂ ತುಂತುರು ಹನಿ ನೀರಾವರಿ ಸೌಲಭ್ಯ ಒದಗಿಸಿರುವುದು, ಮುಖ್ಯ ಬೆಳೆಗಳಾದ ಶ್ರೀಗಂಧ, ಸೀತಾಫಲ, ಹಾಗೂ ಇತರೆ ಕೃಷಿಅರಣ್ಯ ಗಿಡಗಳ ಬೆಳವಣಿಗೆಗೆ ಬಹಳ ಅನುಕೂಲಕರವಾಗಿ ಸಮೃದ್ಧವಾಗಿ ಬೆಳೆಯುತ್ತಿವೆ.

<table>
<tr><td>13</td><td>ಶ್ರೀಗಂಧ ಮತ್ತು ಅತಿಥೇಯ ಗಿಡಗಳ ಬೆಳವಣಿಗೆ ಮತ್ತು ಎದುರಿಸಿದ ಸಮಸ್ಯೆಗಳು.</td><td colspan="2">(ಅ) ಒಂದು ಟ್ರೆಂಚ್‌ನಲ್ಲಿ 1 ಮೀಟರ್ ಅಂತರದಲ್ಲಿ ಕಸಿ ಸೀತಾಫಲ, ಮಲಬರಿ/ರೇಷ್ಮೆ, ಹೆಬ್ಬೇವು ಸಸಿಗಳನ್ನು ಅತಿಥೇಯ ಪ್ರಬೇಧಗಳಾಗಿ ಬೆಳೆಯಲಾಗುತ್ತಿತ್ತು.<br>1) ಮಲಬರಿ/ರೇಷ್ಮೆಯು ಎರಡು ವರ್ಷಗಳಲ್ಲಿ ಬೆಳವಣಿಗೆ ಕುಂಠಿತಗೂಂಡು ನಶಿಸಿ ಹೋಯಿತು. ಆದ್ದರಿಂದ ಈ ಪ್ರಬೇಧವು ಒಳ್ಳೆಯ ಅತಿಥೇಯವಲ್ಲ ಎಂದು ಅನುಭವಕ್ಕೆ ಬಂದಿತು.<br>2) ಕಸಿ ಸೀತಾಫಲವು ನೀರಾವರಿ ಸೌಲಭ್ಯದಿಂದಾಗಿ ಉತ್ತಮವಾಗಿ ಬೆಳೆಯುತ್ತಿದೆ.<br>3) ಹೆಬ್ಬೇವು ವೇಗವಾಗಿ ಎತ್ತರವಾಗಿ ಬೆಳೆದು, ಅದರ ನೆರಳಿನಿಂದಾಗಿ ಶ್ರೀಗಂಧ & ಸೀತಾಫಲ ಬೆಳವಣಿಗೆ ಬಹಳಷ್ಟು ಕುಂಠಿತವಾಗುತ್ತಿರುವುದು ಅನುಭವಕ್ಕೆ ಬಂದಿತು.</td></tr>
<tr><td rowspan="11">14</td><td rowspan="11">ಕೇವಲ ನಾಲ್ಕು ವರ್ಷದ ಹೆಬ್ಬೇವಿನ ಕತ್ರಾವಣೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾದ ಅನುಭವ ಮತ್ತು ಹೆಬ್ಬೇವಿನ ಗಿಡಗಳ ಕತ್ರಾವಣೆ ವಿವರ</td><td colspan="2">1) ಹೆಬ್ಬೇವು ಉತ್ತಮ ಅತಿಥೇಯ ಪ್ರಭೇದವಾಗಿ ಶ್ರೀಗಂಧ ಸಸಿಯಿಂದ 1 ಮೀಟರ್ ಅಂತರದಲ್ಲಿ ನೀರಾವರಿ ಸೌಲಭ್ಯದೊಂದಿಗೆ ಬೆಳೆಯಲಾಯಿತು. ತೀವ್ರವಾಗಿ ಎತ್ತರವಾಗಿ ಬೆಳೆದು ಸಾಕಷ್ಟು ನೆರಳನ್ನುಂಟು ಮಾಡಿದ್ದರಿಂದ ಶ್ರೀಗಂಧ ಮತ್ತು ಸೀತಾಫಲ ಬೆಳವಣಿಗೆಗೆ ತೂಂದರೆಯಾಗುತ್ತಿರುವುದು ಗಮನಕ್ಕೆ ಬಂದಿದ್ದರಿಂದ, ಕೇವಲ ನಾಲ್ಕು ವರ್ಷದ ಹೆಬ್ಬೇವನ್ನು, ಮುಖ್ಯ ಬೆಳೆ ಶ್ರೀಗಂಧದ ಬೆಳವಣಿಗೆಗೆ ಅನೂಕೂಲವಾಗಲೆಂದು ಕತ್ರಾವಣೆ ಮಾಡಲು ನಿರ್ಧರಿಸಲಾಯಿತು.</td></tr>
<tr><td>ಕತ್ರಾವಣೆ ಮಾಡಿದ ವರ್ಷ & ತಿಂಗಳು</td><td>ಅಕ್ಟೋಬರ್ 2021</td></tr>
<tr><td>ಕತ್ರಾವಣೆ ಮಾಡಿದ ಹೆಬ್ಬೇವು ಗಿಡಗಳ ಸಂಖ್ಯೆ</td><td>10,000 ಗಿಡಗಳು</td></tr>
<tr><td>ಉಳಿಕೆ ಮಾಡಿಕೊಂಡ ಹೆಬ್ಬೇವು ಗಿಡಗಳ ಸಂಖ್ಯೆ (30 ಸೆಂ.ಮೀ. ಕ್ಕಿಂತಲೂ ಕಡಿಮೆ ಸುತ್ತಳತೆ)</td><td>3000 ಗಿಡಗಳು</td></tr>
<tr><td>ಕತ್ರಾವಣೆ ಮಾಡಿದ ಹೆಬ್ಬೇವು ಗಿಡಗಳ ಸರಾಸರಿ ಸುತ್ತಳತೆ</td><td>30–50 ಸೆ.ಮೀ</td></tr>
<tr><td>ಕತ್ರಾವಣೆ ಮಾಡಿದ ಹೆಬ್ಬೇವು ಗಿಡಗಳ ಸರಾಸರಿ ಎತ್ತರ</td><td>6–7 ಮೀ.</td></tr>
<tr><td>ಒಟ್ಟು ಲಭ್ಯವಾದ ಪಲ್ಪ್ ವುಡ್ ಪ್ರಮಾಣ</td><td>300 ಟನ್</td></tr>
<tr><td>ಶಿವಮೊಗ್ಗದ ಗುತ್ತಿಗೆದಾರರಿಗೆ ಮಾರಾಟ ಮಾಡಿದ ದರ (ಸಾಗಾಣಿಕೆ ವೆಚ್ಚ ಹೆಚ್ಚಾಗಿದ್ದರಿಂದ ಗುತ್ತಿಗೆದಾರನು ಹೆಚ್ಚಿನ ದರ ನೀಡಲು ಸಮ್ಮತಿಸಿರುವುದಿಲ್ಲ)</td><td>ಟನ್‌ಗೆ ರೂ. 4000/–</td></tr>
<tr><td>ದೊರೆತ ಒಟ್ಟು ಮೊತ್ತ</td><td>ರೂ. 12.00/– ಲಕ್ಷಗಳು.</td></tr>
<tr><td>ನಾಲ್ಕು ವರ್ಷದ ಪ್ರತಿ ಗಿಡಕ್ಕೆ ದೊರೆತ ಸರಾಸರಿ ದರ</td><td>ರೂ. 120/–ಗಿಡಕ್ಕೆ</td></tr>
<tr><td>ನಾಲ್ಕು ವರ್ಷದ ಪ್ರತಿ ಗಿಡಕ್ಕೆ ಪ್ರತಿ ವರ್ಷಕ್ಕೆ ದೊರೆತ ದರ</td><td>ರೂ. 30/– ಗಿಡಕ್ಕೆ/ವರ್ಷಕ್ಕೆ</td></tr>
<tr><td>15</td><td>ಹೆಬ್ಬೇವನ್ನು ಕತ್ರಾವಣೆ ಮಾಡಿದ ಸ್ಥಳದಲ್ಲಿ ಬೇರೆ ಅತಿಥೇಯ ಪ್ರಭೇದಗಳನ್ನು ನೆಡಲಾಗಿದೇ?</td><td colspan="2">ಹೌದು ಬೇರೆ ಪ್ರಬೇಧಗಳನ್ನು ನೆಡಲಾಗಿದೆ. ಸಾಮಾಜಿಕ ಅರಣ್ಯದ ಬೋರಾಳ & ಸಂಗಮ ಸಸ್ಯಕ್ಷೇತ್ರಗಳಿಂದ ಪಡೆದು ಈ ಪ್ರಬೇಧಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೆಡಲಾಗಿದೆ.<br>1) ಹೊಂಗೆ<br>2) ಬೇವು<br>3) ನೇರಳೆ.</td></tr>
<tr><td>16</td><td>ಇವುಗಳಲ್ಲಿ ಯಾವುದು ಹೆಚ್ಚು ಸೂಕ್ತವಾಗಿದೆ?</td><td colspan="2">ಹೊಂಗೆ & ಬೇವು ಇವುಗಳ ಪೈಕಿ ಹೊಂಗೆ ಅತಿ ಸೂಕ್ತವಾಗಿದೆ. ವಾತಾವರಣದಲ್ಲಿಯ ಸಸಾರಜನಕವನ್ನು ಸಂಗ್ರಹಿಸಿ ಶ್ರೀಗಂಧಕ್ಕೆ ಒದಗಿಸುತ್ತದೆ, ಶ್ರೀಗಂಧಕ್ಕಿಂತಲೂ ಎತ್ತರ ಬೆಳೆದರೆ ಕೊಂಬೆಗಳನ್ನು ಕತ್ರಾವಣೆ ಮಾಡಿ ಮಣ್ಣಿನಲ್ಲಿ ಬೆರೆಸಿದರೆ ಹಸಿರು ಗೊಬ್ಬರವಾಗುತ್ತದೆ ಹಾಗೂ ನಿರ್ವಹಣೆ ಮಾಡುವುದು ಸುಲಭ.</td></tr>
<tr><td>17</td><td>ಸೀತಾಫಲ ಅತಿಥೇಯ ಪ್ರಬೇಧಕ್ಕೆ ಆಗುತ್ತಿರುವ ತೂಂದರೆಗಳು</td><td colspan="2">1) ಶ್ರೀಗಂಧಕ್ಕೆ ಸೀತಾಫಲ ಒಳ್ಳೆಯ ಅತಿಥೇಯ ಪ್ರಬೇಧ, ಶ್ರೀಗಂಧ ಬೇರುಗಳು ಹೆಚ್ಚು ಪ್ರಮಾಣದಲ್ಲಿ ಬೆಸೆದುಕೂಂಡು ಬೆಳೆಯುತ್ತಿರುವುದನ್ನು ಕಂಡುಕೊಳ್ಳಲಾಗಿದೆ.<br>2) ಸೀತಾಫಲ ಗಿಡಗಳಲ್ಲಿ ನಿರೀಕ್ಷಿಸಿದಷ್ಟು ಹೆಚ್ಚು ಪ್ರಮಾಣದಲ್ಲಿ ಫಲಗಳು ದೊರೆಯುತ್ತಿಲ್ಲ<br>3) ರೈತ ಸೀತಾಫಲದಿಂದ ಹೆಚ್ಚು ಆದಾಯ ನಿರೀಕ್ಷೆ ಮಾಡದಿದ್ದರೆ, ಇದು ಅತಿ ಉತ್ತಮವಾದ ಅತಿಥೇಯ ಪ್ರಬೇಧ.<br>4) ನೆಟ್ಟ 7ನೆಯ ವರ್ಷದಿಂದ ವಾಣಿಜ್ಯಿಕ ಪ್ರಮಾಣದಲ್ಲಿ ಸೀತಾಫಲ ಫಸಲನ್ನು ಪಡೆಯಲಾಗುತ್ತಿದೆ.<br>5) 4, 5 & 6ನೆಯ ವರ್ಷದ ಫಸಲು ವಾಣಿಜ್ಯಿಕ ಫಸಲಾಗಿರಲಿಲ್ಲ</td></tr>
</table>

| | | | | | | | |
|---|---|---|---|---|---|---|---|
| | | ಫಸಲಿನ ವರ್ಷ | | ದೊರೆತ ಫಸಲಿನ ಪ್ರಮಾಣ | | ದೊರೆತ ಸರಾಸರಿ ದರ | ಮೊತ್ತ |
| | | 2023 | | 2500 ಕಿಲೋ | | ರೂ. 20/ ಕಿಲೋ | ರೂ.50,000/– |
| | | 2024 | | 2500 ಕಿಲೋ | | ರೂ.20/ ಕಿಲೋ | ರೂ.50,000/– |
| 18 | ಶ್ರೀಗಂಧ ಗಿಡಗಳ ಬೆಳವಣಿಗೆ ವಿವರ ದಿನಾಂಕ 9/06/2025 ರಂದು ಪಡೆದ ಅಳತೆಯಂತೆ | ಕ್ರ.ಸಂ. | ಪ್ರಬೇಧ | ಎದೆ ಎತ್ತರಕ್ಕೆ ಸರಾಸರಿ ಸುತ್ತಳತೆ (ಸೆ.ಮೀ) | ಸರಾಸರಿ ಎತ್ತರ (ಮೀಟರ್) | ಹಂದರದ ಅಗಲ (ಮೀಟರ್) | ಕೆಚ್ಚು (Heartwood) ಬೆಳವಣಿಗೆ ಪ್ರಾರಂಭವಾಗಿದೆಯೇ? |
| | | 1 | ಶ್ರೀಗಂಧ (ಟ್ರಂಚ್) | 30.5 | 5.50 | 2.75 | ಹೌದು |
| | | 2 | ಶ್ರೀಗಂಧ (ಗುಂಡಿ) | 32.60 | 6.35 | 3.5 | ಹೌದು |
| | | 3 | ಸೀತಾಫಲ | 22.16 | 1.80 | 2.00 | – |
| | | 4 | ಹೊಂಗೆ | 26.59 | 3.37 | 3.90 | – |
| | | 5 | ನೇರಳೆ | 24.75 | 3.5 | 4.00 | – |
| | | ಶೇಕಡಾ 1 ರಂತೆ 88 ಗಿಡಗಳ ಸರಾಸರಿ. | | | | | |

**(2) ಗುಂಡಿ ಮಾದರಿ ನೆಡುತೋಪು – ಜನವರಿ 2016 ರಲ್ಲಿ ಬೆಳೆಸಿದ್ದು.**

| | | |
|---|---|---|
| 1 | ಕೃಷಿ ಜಮೀನಿನ ಸರ್ವೆ ಸಂಖ್ಯೆ | 23<br>4.5 ಎಕರೆ (1.77 ಹೆ.) |
| 2 | ಗುಂಡಿಗಳ ಅಳತೆ | 0.60 X 0.60 X 0.60 ಘ.ಮೀ. |
| 3 | ಗುಂಡಿಗಳ ಸಾಲುಗಳ ನಡುವಿನ ಅಂತರ | 4 ಮೀಟರ್ |
| 4 | ಸಾಲಿನಲ್ಲಿ ಗುಂಡಿಗಳ ನಡುವಿನ ಅಂತರ | 1.20 ಮೀಟರ್ |
| 5 | ಒಟ್ಟು ಗುಂಡಿಗಳು | 3600 ಗುಂಡಿಗಳು (2083/ಹೆ.) |
| 6 | ನೆಟ್ಟ ಸಸಿಗಳು | 1) ಕಸಿ ಸೀತಾಫಲ – 1200 |
| | | 2) ಶ್ರೀಗಂಧ –1200 |
| | | 3) ಹೆಬ್ಬೇವು – 1200 |
| 7 | ನೀರಾವರಿ | ಹನಿ ನೀರಾವರಿ |
| 8 | ಅಂತರ ಬೆಳೆ | ಇಲ್ಲಿಯೂ ಅಂತರ ಬೆಳೆಯಾಗಿ ತೊಗರಿ, ಹೆಸರು, ಉದ್ದು, ಸೋಯಾಬಿನ್ ಬೆಳೆಯಲಾಗಿದೆ. |
| 9 | ಹೆಬ್ಬೇವು | ಈ ತೋಪುವಿನಲ್ಲೂ ಸಹ ಹೆಚ್ಚು ಎತ್ತರವಾಗಿ ಬೆಳೆದಿದ್ದರಿಂದ ಕತ್ರಾವಣೆಯನ್ನು 2021 ರಲ್ಲಿ ಮಾಡಲಾಗಿದೆ. |
| 10 | ಗಿಡಗಳ ಹಂದರ | ಈ ತೋಪುವಿನಲ್ಲಿ ಶ್ರೀಗಂಧದ ಮತ್ತು ಸೀತಾಫಲ ಗಿಡಗಳ ಹಂದರ ಸಮೃದ್ಧವಾಗಿ ಬೆಳೆದಿದ್ದರಿಂದ ಕಳೆದ ವರ್ಷದಿಂದ ಅಂತರ ಬೆಳೆ ಬೆಳೆಯುತ್ತಿಲ್ಲ. |

**1. ಶ್ರೀಗಂಧ ನೆಡುತೋಪನ್ನು ಬೆಳೆಸಿ ಈ ಏಳು ವರ್ಷಗಳಲ್ಲಿ ಕಲಿತ ಅನುಭವಗಳು.**

| | |
|---|---|
| 1 | ಹೆಬ್ಬೇವು ಪ್ರಬೇಧವನ್ನು ಶ್ರೀಗಂಧದ ಜೊತೆ ಅತಿಥೇಯ ಪ್ರಬೇಧವಾಗಿ ಕಡಿಮೆ ಅಂತರದಲ್ಲಿ ನಾಟಿ ಮಾಡಿ ಬೆಳೆಸಬಾರದು. |
| 2 | ಶ್ರೀಗಂಧ ತೋಪಿನಲ್ಲಿ ಈಗಾಗಲೇ ಹೆಬ್ಬೇವನ್ನು ಅತಿಥೇಯ ಬೆಳೆಯಾಗಿ ಬೆಳೆಯುತ್ತಿದ್ದರೆ, ಹೆಬ್ಬೇವು ಅತಿಥೇಯ ಬೆಳೆಯಾಗಿ ಶ್ರೀಗಂಧಕ್ಕಿಂತಲೂ ಎತ್ತರವಾಗಿ ಬೆಳೆದು ನೆರಳಾಗಿದ್ದರೆ, ಶ್ರೀಗಂಧದ ಉತ್ತಮ ಬೆಳವಣಿಗೆಗಾಗಿ ಹೆಬ್ಬೇವನ್ನು ಕತ್ತಾವಣೆ ಮಾಡುವುದೇ ಒಳಿತು. |
| 3 | ಹೆಬ್ಬೇವನ್ನು ಕಡಿಮೆ ಅವಧಿಯಲ್ಲಿ ಕತ್ತಾವಣೆ ಮಾಡುವುದರಿಂದ ರೈತರಿಗೆ ನಷ್ಟವುಂಟಾಗುತ್ತದೆ. |
| 4 | ಪ್ರಮಾಣಿತ ಶಿಫಾರಸ್ಸಿನಂತೆ 5–6 ಮೀ. ಅಂತರದಲ್ಲಿ ಹೆಬ್ಬೇವನ್ನು ನೆಟ್ಟು ಬೆಳೆಸುವುದು ಒಳಿತು. |
| 5 | ಹೆಬ್ಬೇವನ್ನು ಕೃಷಿ ಜಮೀನಿನ ಸುತ್ತಲೂ 6 ಮೀಟರ್ ಅಂತರದಲ್ಲಿ 1–2 ಸಾಲುಗಳಲ್ಲಿ ನೆಡುವುದು ಸೂಕ್ತ |
| 6 | ಹೆಬ್ಬೇವು ಕತ್ತಾವಣೆ ಮಾಡಿದ ಸ್ಥಳದಲ್ಲಿ 5 ಮೀಟರ್ ಅಂತರದಲ್ಲಿ ಹೊಂಗೆ ಮತ್ತು ಬೇವು ಇವುಗಳನ್ನು ಅತಿಥೇಯ ಪ್ರಬೇಧವಾಗಿ ಬೆಳೆಯಲಾಗಿದೆ, ಹೊಂಗೆ ಅತಿ ಸೂಕ್ತ. |
| 7 | ಯಾವುದೇ ಹಣ್ಣಿನ ಪ್ರಬೇಧವನ್ನು ಅತಿಥೇಯವಾಗಿ ಬೆಳೆದರೆ ವಾಣಿಜ್ಯಿಕ ಇಳುವರಿಯನ್ನು ನಿರೀಕ್ಷಿಸುವಂತಿಲ್ಲ. |
| 8 | ನೀರಾವರಿ ಸೌಲಭ್ಯದಲ್ಲಿ ಅಂತರ ಬೆಳೆ ಬೆಳೆಯುವುದು ಶ್ರೀಗಂಧದ ಬೆಳವಣಿಗೆಗೆ ಬಹಳ ಅನೂಕೂಲವಾಗುತ್ತದೆ, ಭಾಗಶಃ ನೆಡುತೋಪು ನಿರ್ಮಾಣದ ವೆಚ್ಚವನ್ನು ಮರಳಿ ಪಡೆಯಬಹುದಾಗಿದೆ. |
| 9 | 5 ವರ್ಷಗಳ ನಂತರ ಶ್ರೀಗಂಧಕ್ಕೆ ನೀರಾವರಿಯನ್ನು ನಿಲ್ಲಿಸುವುದು ಸೂಕ್ತ |
| 10 | ಸದರಿ ಶ್ರೀಗಂಧದ ಗಿಡಗಳ ಸವರುವಿಕೆಯಲ್ಲಿ ಭೂಮಿಯಿಂದ ಮೇಲ್ಭಾಗದ ರೆಂಬೆ–ಕೊಂಬೆಗಳನ್ನು ಅಂದಾಜು 2/3 ಭಾಗದವರೆಗೆ ತೆಗೆದಿರುವುದರಿಂದ ಮತ್ತು ಹೆಬ್ಬೇವಿನೊಂದಿಗೆ ಹೆಚ್ಚು ಸೂರ್ಯ ಪ್ರಕಾಶಕ್ಕಾಗಿ ಸ್ಪರ್ಧೆಯೊಡ್ಡಿ ಶ್ರೀಗಂಧದ ಗಿಡಗಳು ತೆಳ್ಳಗೆ ಹಾಗೂ ಎತ್ತರವಾಗಿ ಬೆಳೆದಿರುತ್ತವೆ, ಸಾಮಾನ್ಯವಾಗಿ ಗಿಡದ 1/3 ಭಾಗವನ್ನು ಸವರುವುದು ಸೂಕ್ತ. |
| 11 | ಮಲಬರಿ/ರೇಷ್ಮೆಯನ್ನು 1–2 ವರ್ಷಗಳ ಅವಧಿಗೆ ತಾತ್ಕಾಲಿಕ/ಹಂಗಾಮಿ ಅತಿಥೇಯ ಪ್ರಬೇಧವಾಗಿ ಬೆಳೆಯಬಹುದು. |
| 12 | 8–10 ವರ್ಷಗಳವರೆಗೆ ಶ್ರೀಗಂಧ ಮರಗಳಲ್ಲಿ ಯಾವುದೇ ಚೇಗು ಬೆಳವಣಿಗೆ ಇಲ್ಲದಿರುವುದರಿಂದ ರಕ್ಷಣಾ ಬೇಲಿ ಅತಿ ಅವಶ್ಯಕವೇನಲ್ಲ, ನಂತರ ರಕ್ಷಣಾ ವ್ಯವಸ್ಥೆ ಅವಶ್ಯಕ. |


**2. ಶ್ರೀಗಂಧ ಬೆಳೆಗಾರನಾಗಿ ಘನ ಸರ್ಕಾರದಿಂದ ನಿರೀಕ್ಷಿಸುವ ಸೌಲಭ್ಯಗಳು.**

| | |
|---|---|
| 1 | ಶ್ರೀಗಂಧ ಧೀರ್ಘಕಾಲಿನ ಬೆಳೆಯಾಗಿರುವದರಿಂದ, ಪ್ರಾರಂಭಿಕವಾಗಿ ಹೆಚ್ಚು ವೆಚ್ಚದಾಯಕ ಬೆಳೆಯಾಗಿರುವುದರಿಂದ, ಯಾವುದೇ ಬ್ಯಾಂಕುಗಳು ಶ್ರೀಗಂಧ ಬೆಳೆಗಾರನಿಗೆ ಸಾಲ ಕೊಡುತ್ತಿಲ್ಲ, ಸಾಲ ಸೌಲಭ್ಯ ದೊರೆಯುವಂತಾಗಬೇಕು. |
| 2 | ಶ್ರೀಗಂಧ ಮರಗಳ ರಕ್ಷಣೆಗೆ ವಿಮಾ ಸೌಲಭ್ಯ ದೊರೆಯಬೇಕು. |
| 3 | ಶ್ರೀಗಂಧ ತೋಪಿನ ಸುತ್ತಲೂ ರಕ್ಷಣಾ ಬೇಲಿ ನಿರ್ಮಿಸುವುದಕ್ಕಾಗಿ ಸಹಾಯಧನ ಸೌಲಭ್ಯ ದೊರೆಯುವಂತಾಗಬೇಕು |
| 4 | ಶ್ರೀಗಂಧ ತೋಪಿನ ರಕ್ಷಣೆಗಾಗಿ ಕೃಷಿಕರಿಗೆ ಬಂದೂಕು ಪರವಾನಿಗೆ ಕೊಡುವ ಸೌಲಭ್ಯ ದೊರೆಯಬೇಕು. |
| 5 | ಕಂದಾಯ ದಾಖಲೆಗಳಲ್ಲಿ ಶ್ರೀಗಂಧ ಮರಗಳ ಇಂಡಿಕರಣಕ್ಕಾಗಿ ಅರಣ್ಯ ಮತ್ತು ಕಂದಾಯ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಿ, ಬೇಗನೆ ಇಂಡಿಕರಣ ಮಾಡುವಂತಹ ಸೌಲಭ್ಯ ದೊರೆಯಬೇಕು. |
| 6 | ಶ್ರೀಗಂಧ ಮಾರಾಟ ಮಾಡುವಾಗ ರೈತನಿಗೆ ಯಾವುದೇ ಮೋಸವಾಗದಂತೆ ಉತ್ತಮ ಬೆಲೆ ಸಿಗುವಂತಾಗಬೇಕು. |

# ಶ್ರೀ ಭಾನುದಾಸ ವೆಂಕಟರಾವ್ ಪಾಟೀಲ, ಅಖನಾಪುರ ಇವರ 2016ನೇ ಸಾಲಿನ ಶ್ರೀಗಂಧ ತೋಪಿನ ಛಾಯಾಚಿತ್ರಗಳು. ದಿನಾಂಕ 09/06/2025 – ಒಂಭತ್ತು ವರ್ಷ ವಯಸ್ಸಿನ ಮರಗಳು.




ಶ್ರೀಗಂಧ ತೋಪಿನ ಎರಡು ಸಾಲುಗಳ ದೃಶ್ಯ.




ಶ್ರೀಗಂಧ ಮರ ಅತಿಥೇಯ ಸೀತಾಫಲದೊಂದಿಗೆ.




ಶ್ರೀಗಂಧ ಮರ ಅತಿಥೇಯ ಹೊಂಗೆ ಮರದೊಂದಿಗೆ.



23/10/2018 ರಂದು ತೆಗೆದ ಛಾಯಾಚಿತ್ರ. ಎರಡು ವರ್ಷದ ಬೆಳವಣಿಗೆ ಟ್ರಂಚ್ ಮಾದರಿ ನೆಡುತೋಪು, ಒಂದು ಟ್ರಂಚ್‌ನಲ್ಲಿ 1.00 ಮೀ. ಅಂತರದಲ್ಲಿ ಸೀತಾಫಲ, ರೇಷ್ಮೆ, ಶ್ರೀಗಂಧ, ಹೆಬ್ಬೇವು ನೆಡಲಾಗಿದೆ ಹಾಗೂ ಅಂತರ ಬೆಳೆ ಪಪ್ಪಾಯ ಬೆಳೆಯಲಾಗಿದೆ.



ಶ್ರೀಗಂಧ ಮರ ಅತಿಥೇಯ ನೇರಳೆ ಮರದೊಂದಿಗೆ ಶ್ರೀ ಗೋವಿಂದ ಭಾನುದಾಸ ಪಾಟೀಲ.



23/10/2018 ರಂದು ತೆಗೆದ ಛಾಯಾಚಿತ್ರ ಎರಡು ವರ್ಷದ ಬೆಳವಣಿಗೆ ಟ್ರಂಚ್ ಮಾದರಿ ನೆಡುತೋಪು, ಒಂದು ಟ್ರಂಚ್‌ನಲ್ಲಿ 1.00 ಮೀ. ಅಂತರದಲ್ಲಿ ಸೀತಾಫಲ, ರೇಷ್ಮೆ, ಶ್ರೀಗಂಧ, ಹೆಬ್ಬೇವು ನೆಡಲಾಗಿದೆ – ಕೃಷಿಕ ಶ್ರೀ ಭಾನುದಾಸ ಪಾಟೀಲ.



ಛಾಯಾ ಚಿತ್ರ ತೆಗೆದ ದಿನಾಂಕ 23/10/2018. 2016 ರಲ್ಲಿ ಬೆಳೆಸಿದ ಗುಂಡಿ ಮಾದರಿಯ ನೆಡುತೋಪು - ಶ್ರೀಗಂಧ, ಸೀತಾಫಲ, ಹೆಬ್ಬೇವು.

# ಸೀತಾಫಲ (Custard Apple)



– ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ (ನಿ)

**ಕನ್ನಡ ಭಾಷೆ:** ಸೀತಾಫಲ
**ಆಂಗ್ಲ ಭಾಷೆ:** Custard Apple
**ಸಸ್ಯಶಾಸ್ತ್ರೀಯ ಹೆಸರು:** ಅನೋನಾ ಸ್ಕಾಮೋಸಾ. ಲಿ. (Annona squamosal L.)
**ಕುಟುಂಬ:** ಅನೋನೇಶಿ

**ಬೀಜಗಳ ಸಂಗ್ರಹ:**

ಬಲಿತ ಹಣ್ಣುಗಳಿಂದ ಬೀಜಗಳನ್ನು ಸಂಗ್ರಹಿಸಬೇಕು. ಹಣ್ಣುಗಳು ಅಕ್ಟೋಬರ್ ತಿಂಗಳಿನಲ್ಲಿ ಬಲಿಯುತ್ತವೆ. ಒಂದು ಕೆ.ಜಿ. ತೂಕದಲ್ಲಿ 4000 ಬೀಜಗಳಿರುತ್ತವೆ.

**ಬೀಜಗಳ ಸಂಸ್ಕರಣೆ ಮತ್ತು ಬೀಜೋಪಚಾರ:**

ಈ ಹಣ್ಣಿನ ಗಿಡವನ್ನು ಸಾಮಾನ್ಯವಾಗಿ ಬೀಜದಿಂದಲೇ ಬೆಳೆಸಬಹುದು. 20–30 ದಿವಸಗಳಲ್ಲಿ ಮೊಳಕೆಯೊಡೆಯುತ್ತವೆ. ನಂತರ 6 ತಿಂಗಳಿನಲ್ಲಿ ನಾಟಿ ಮಾಡಲು ಸಿದ್ಧವಾಗುತ್ತವೆ. ಸಸ್ಯದ ಅಥವಾ ಸಸ್ಯ ಭಾಗಗಳಿಂದ ಬೆಳೆದಲ್ಲಿ ಒಂದೇ ತರಹದ ಗಿಡಗಳನ್ನು ಬೆಳೆಸಲು ಸಾಧ್ಯ. ಸಾಮಾನ್ಯವಾಗಿ ಬಡ್ಡಿಂಗ್ ವಿಧಾನವನ್ನು ಚೈತ್ರಮಾಸದಲ್ಲಿ ಅಥವಾ ಚಳಿಗಾಲದ ಅಂತ್ಯದಲ್ಲಿ ಬೆಳೆಸಲು ಪ್ರಯತ್ನಿಸುವುದು ಸೂಕ್ತ. ಒಂದು ವರ್ಷದ ರೂಟ್ ಸ್ಟಾಕ್ ಗಿಡಗಳಿಗೆ ಒಂದು ವರ್ಷ ಬೆಳೆದ ಸಯಾನ್ ಬಳಸಿ ಚೈತ್ರ ಮಾಸದಲ್ಲಿ ಸಹಜ ಕಸಿ ಮಾಡುವುದರಿಂದ ಬೆಳೆಸುವುದು ಸೂಕ್ತ.

**ನೆಡುತೋಪಿನ ನಿರ್ವಹಣೆ:** ಸಾಮಾನ್ಯವಾಗಿ ಬಿಳಿ ವಾತಾವರಣ ಹಾಗೂ ಹೆಚ್ಚು ತೇವಾಂಶವಿರುವ ವಾತಾವರಣ ಮತ್ತು ಕಡಿಮೆ ಚಳಿಯಿರುವ ಚಳಿಗಾಲವು ಈ ಗಿಡದ ಹೆಚ್ಚು ಬೆಳವಣಿಗೆ ಮತ್ತು ಉತ್ಪಾದನೆಗೆ ಸೂಕ್ತ. ಸೀತಾಫಲಕ್ಕೆ ಎಲ್ಲಾ ತರಹದ ಮಣ್ಣಿನಲ್ಲೂ ಬೆಳೆಯುವ ಹಾಗೂ ಕಡಿಮೆ ಆಳವಿರುವ, ಮರಳು ಮಣ್ಣಿನಲ್ಲಿಯೂ ಬೆಳೆಯುವುದು. ಆದರೆ ತಳಭಾಗದ ಮಣ್ಣು ಸರಿಯಾದ ರೀತಿಯಲ್ಲಿ ನೀರು ಬಸಿಯುವಂತಿರಬೇಕು. ನೀರು ಬಸಿಯುವ ಆಳದ ಕಪ್ಪು ಭೂಮಿಯಲ್ಲೂ ಚೆನ್ನಾಗಿ ಬೆಳೆಯುವುದು. ಕಡಿಮೆ ಪ್ರಮಾಣದ ಉಪ್ಪಿನಂಶ ಅಥವಾ ಆಮ್ಲೀಯ ಮಣ್ಣಿನ ಭೂಮಿಯಲ್ಲೂ ಬೆಳೆಯುವುದು. ಆದರೆ ಕ್ಲೋರಿನ್, ನೀರು ಬಸಿಯದ ಅಥವಾ ಜೌಗು ಪ್ರದೇಶಗಳು ಗಿಡದ ಬೆಳವಣಿಗೆಗೆ ಸಹಕರಿಸುವುದಿಲ್ಲ.

ಗಿಡಗಳನ್ನು ಮಳೆಗಾಲದಲ್ಲಿ ಮಳೆಯಾಶ್ರಿತ ಬೆಳೆಯಾಗಿ 60 X 60 X 60 ಸೆಂ.ಮೀನ ಗುಂಡಿಗಳಲ್ಲಿ 4 X 4 ಅಥವಾ 5 X 5 ಅಥವಾ 6 X 6 ಮೀ ಅಂತರದಲ್ಲಿ ಮಣ್ಣಿನ ವಿಧಕ್ಕೆ ತಕ್ಕಂತೆ ಮಳೆಗಾಲಕ್ಕೆ ಮುಂಚಿತವಾಗಿ ಗುಂಡಿ ತೆಗೆದು, ಆ ಗುಂಡಿಗಳಿಗೆ ಉತ್ತಮ ಗುಣಮಟ್ಟದ ಕೊಟ್ಟಿಗೆ ಗೊಬ್ಬರ, ಸಿಂಗಲ್ ಸೂಫರ್ ಪಾಸ್ಫೇಟ್ ಮತ್ತು ಬೇವು ಅಥವಾ ಹೊಂಗೆ ಹಿಂಡಿಯೊಂದಿಗೆ ಮುಚ್ಚಬೇಕು. ನೀರಾವರಿಯಿದ್ದಲ್ಲಿ 6 X 4 ಮೀ ಅಂತರದಲ್ಲಿ ಬೆಳೆಯುವುದರಿಂದ ಉತ್ತಮವಾದ ಬೆಳವಣಿಗೆ ಮತ್ತು ಹಣ್ಣು ಬಿಡುವುದನ್ನು ಕಾಣಬಹುದು.

ಸಸಿಗಳನ್ನು ನಾಟಿ ಮಾಡುವಾಗ 50 ಗ್ರಾಂ. ಪೋಟೋ ಬ್ಯಾಕ್ಟೀರಿಯಂ ಮತ್ತು 150 ಗ್ರಾಂ. ವೆಸಿಕ್ಯೂಲರ್ ಮೈಕೋರೈಜಾ ಸೂಕ್ಷ್ಮಾಣು ಜೀವಿಗಳ ಮಿಶ್ರಣವನ್ನು ಸಸಿಗಳ ಬೇರುಗಳಿಗೆ ಹಾಗೂ ನಾಟಿ ಮಾಡಿರುವ ಗಿಡಗಳಿಗೂ ಸಹ ನೀಡುವುದು ಸೂಕ್ತ.

ಬೇಸಿಗೆ ಸಮಯದಲ್ಲಿ ನಾಟಿ ಮಾಡಿರುವ ಸಸಿಗಳ ಮೇಲ್ಭಾಗದ ಮಣ್ಣಿಗೆ ಕೊಟ್ಟಿಗೆ ಗೊಬ್ಬರ ಹಾಕುವುದರಿಂದ ಬೇರುಗಳ ತ್ವರಿತ ಬೆಳವಣಿಗೆ ಮತ್ತು ಗಿಡಗಳು ಚೆನ್ನಾಗಿ ಬೆಳೆಯುತ್ತವೆ.

**ಮಾದರೀ ಅಂತರ:** 5 X 5 ಮೀ ಸೂಕ್ತವಾದದ್ದು.

**ಕೀಟಗಳು, ರೋಗಗಳು ಮತ್ತು ನಿರ್ವಹಣೆ:** ಕೀಟಗಳಾದ ಮೀಲೀ ಬಗ್ಸ್ – ಇವುಗಳು ಹಣ್ಣುಗಳ ಮೇಲೆ ಕಲೆಯನ್ನುಂಟು ಮಾಡಲಿವೆ. ಇದಕ್ಕೆ 0.05% ಡೈಕ್ಲೋರವಾಸ್ ದ್ರಾವಣವನ್ನು ಸಿಂಪರಿಸಬೇಕು.

**ರೋಗಗಳು:** ಲೀಫ್ ಮೇಲಿನ ಚುಕ್ಕೆಯು ಎಲೆಗಳು ವೇಗವಾಗಿ ಉದುರಲು ಕಾರಣವಾಗಲಿದೆ. ಇದನ್ನು 15 ದಿವಸಗಳಿಗೊಮ್ಮೆ 0.05% ಕಾರ್ಬನ್ ಡೈ ಜೀನ್ ದ್ರಾವಣವನ್ನು ರೋಗ ಲಕ್ಷಣ ಕಂಡ ಸಮಯದಿಂದ ಸಿಂಪರಿಸಬೇಕು.

**ಆಂತ್ರಾಕ್‌ನೋಸ್** ರೋಗವು ಹೂ ಬಿಡುವ ಸಮಯದಲ್ಲಿ ಪ್ರಾರಂಭವಾಗಿ ಹಣ್ಣುಗಳು ಕೊನೆಯಾಗುವವರೆಗೂ ಇದ್ದು ಪೂರ್ಣವಾಗಿ ಹಣ್ಣುಗಳನ್ನು ಒಣಗಿಸುತ್ತದೆ. ಒಣಗಿದ ಹಣ್ಣುಗಳು ಗಿಡಗಳಲ್ಲಿ ನೇತಾಡಬಹುದು ಹಾಗೂ ಬೀಳಲೂಬಹುದು.

**ಆರ್ಥಿಕ ಕಟಾವು:** 12–15 ವರ್ಷಗಳು.

**ಇಳುವರಿ:** ಸರಾಸರಿ 7 ಟನ್‌ಗಳನ್ನು ಪ್ರತೀ ಹೆಕ್ಟೇರ್ ಪ್ರದೇಶದಿಂದ ಪಡೆಯಬಹುದು. ಹೆಚ್ಚು ದಟ್ಟವಾಗಿ ಬೆಳೆದ ನೆಡುತೋಪುಗಳಿಂದ 25 ಟನ್‌ವರೆಗೂ ಪಡೆಯಲು ಸಾಧ್ಯ.

**ಉಪಯೋಗಗಳು:** ಹಣ್ಣುಗಳು ತಿನ್ನಲು ರುಚಿಕರವಾಗಿರುತ್ತವೆ. ಗಿಡಗಳನ್ನು ಔಷಧಿಯಾಗಿ ಬಳಸಬಹುದು. ಸಿಹಿಯಾದ ಮತ್ತು ಬಲಿತ ಹಣ್ಣುಗಳನ್ನು 'ಡೆಸರ್ಟ್' ಫ್ರೂಟ್ ಎನ್ನುವರು. ಇವುಗಳನ್ನು ಷರಬತ್ತು, ಐಸ್‌ಕ್ರೀಮ್, ಜೆಲ್ಲಿ ತಯಾರಿಕೆಯಲ್ಲಿ ಬಳಸಲಾಗುವುದು.

**ಕೊಯ್ಲು:** ಬಲಿತ ಹಣ್ಣುಗಳನ್ನು ಸರಿಯಾದ ಸಮಯದಲ್ಲಿ ಕೊಯ್ಲು ಮಾಡುವರು. ತಿಳಿ ಹಸಿರು ಬಣ್ಣದ, ತೊಳೆಗಳ ಮಧ್ಯೆ ಹಳದೀ ಬಣ್ಣವಿದ್ದು, ಹಣ್ಣುಗಳು ಬಿರುಕು ಬಿಡಲು ಪ್ರಾರಂಭಿಸಿದಾಗ, ಹಣ್ಣುಗಳು ಕೊಯ್ಲಿಗೆ ತಯಾರಿರುವುದಾಗಿ ತಿಳಿಯಬಹುದು. ಕೈಯಿಂದ ಹಣ್ಣುಗಳನ್ನು ತೆಗೆಯಲಾಗುವುದು. ಅಕ್ಟೋಬರ್–ನವೆಂಬರ್ ತಿಂಗಳಿನಲ್ಲಿ ಹೆಚ್ಚಿಗೆ ಹಣ್ಣುಗಳು ದೊರೆಯುತ್ತವೆ. 4 ರಿಂದ 5 ವರ್ಷಗಳ ಗಿಡಗಳಿಂದ 80–100 ಹಣ್ಣುಗಳನ್ನು ಪಡೆಯಬಹುದು. ಗಿಡಗಳಿಂದ ಕತ್ತರಿಸಿದ ಒಂದೇ ದಿನದಲ್ಲಿ ಹಣ್ಣಾಗುತ್ತವೆ. ಬಲಿತ ಹಣ್ಣುಗಳು $15–20^0$ ಸೆಂಟಿಗ್ರೇಡ್ ಉಷ್ಣತೆ ಹಾಗೂ 85–90% ತೇವಾಂಶದ ಗಾಳಿಯಲ್ಲಿ, ಕಡಿಮೆ ಆಮ್ಲಜನಕ ಮತ್ತು ಎತಲೀನ್ ಹಾಗೂ ಶೇ.10ರ ಕಾರ್ಬನ್ ಡೈ ಆಕ್ಸೈಡ್ ಇರುವ ಗಾಳಿಯಲ್ಲಿ, ಹಣ್ಣುಗಳನ್ನು 12 ರಿಂದ 18 ದಿವಸ ಶೇಖರಿಸಿಡಬಹುದು.

**ಮಾರುಕಟ್ಟೆ ದರ:** ಮಾರುಕಟ್ಟೆಯ ದರವು ಸರಾಸರಿ ರೂ.35/ ಪ್ರತಿ ಕೆ.ಜಿ.ಗೆ ದೊರೆಯುವುದು.

ಲೇಖಕರ ಸಂಪರ್ಕಕ್ಕಾಗಿ:
ಮೊ: 9448126246
shivanandamurthyifs@gmail.com

**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**

ಸಂಖ್ಯೆ: ಅಪ್ರಮುಅಸಂ(ಅಸಂನಿ)
ಬಿ3.ಸೇಲ್ಸ್.ಸಿಆರ್– 06/2025–26

ಇ–ಕಛೇರಿ ಕಡತ ಸಂಖ್ಯೆ: 1800375

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)ರವರ ಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು ದಿನಾಂಕ: 10–06–2025

ಇವರಿಗೆ

ಇಲಾಖೆ ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ /
ಅರಣ್ಯ ಸಂರಕ್ಷಣಾಧಿಕಾರಿಗಳಿಗೆ /
(ಪ್ರಾದೇಶಿಕ ವೃತ್ತಗಳು)

ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ
(ಪ್ರಾದೇಶಿಕ ವಿಭಾಗಗಳು)

**ವಿಷಯ: ಶ್ರೀಗಂಧ ಕುರಿತು ಕರ್ನಾಟಕ ಅರಣ್ಯ ನಿಯಮಾವಳಿ, 1969ರ ವಿವಿಧ ನಿಯಮಗಳ ಕುರಿತು**

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಅಪಜೀ 46 ಎಫ್‌ಡಿಪಿ 2022 ದಿನಾಂಕ 31.12.2022.
2. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂಪನ್ಮೂಲ ನಿರ್ವಹಣೆ) ಬೆಂಗಳೂರು ಇವರ ಪತ್ರ ಸಂಖ್ಯೆ : ಅಪ್ರಮುಅಸಂ(ಅಸಂನಿ) ಬಿ5.ಕೆಪಿಟಿ.ಸಿಆರ್–95/2021–22, ದಿನಾಂಕ 10.01.2023.
3. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ 15.04.2024.
4. ಸರ್ಕಾರದ ಪತ್ರ ಸಂಖ್ಯೆ : ಅಪಜೀ 46 ಎಫ್‌ಡಿಪಿ 2022, ದಿನಾಂಕ 22.03.2024.

ಉಲ್ಲೇಖ(1)ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಅರಣ್ಯ ನಿಯಮಾವಳಿ 1969ರ ನಿಯಮಗಳು 108, 122 ಮತ್ತು 123ಕ್ಕೆ ತಿದ್ದುಪಡಿ ಮಾಡಲಾಗಿದ್ದು, ಸದರಿ ಅಧಿಸೂಚನೆಯ ಪ್ರತಿಯನ್ನು ಉಲ್ಲೇಖ(2)ರ ಪತ್ರದಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂಪನ್ಮೂಲ ನಿರ್ವಹಣೆ) ಬೆಂಗಳೂರು ಇವರು ಈಗಾಗಲೇ ಎಲ್ಲಾ ಅಧೀನ ಕಛೇರಿಗಳಿಗೆ ಮಾಹಿತಿಗಾಗಿ ಕಳುಹಿಸಲಾಗಿರುತ್ತದೆ ಹಾಗೂ ಇಲಾಖೆಯ ಅಧಿಕೃತ ಅಂತರ್ಜಾಲ www.aranya.gov.in ನಲ್ಲಿಯೂ ಸಹ ಈಗಾಗಲೇ ಪ್ರಕಟಸಲಾಗಿದೆ.

ಶ್ರೀಗಂಧ ಮರಗಳ ಕಠಾವಣೆ, ಸಾಗಾಣಿಕೆ ಮತ್ತು ವಿಲೇವಾರಿ ಮಾಡುವ ಕುರಿತು ನಿಯಮ 108ಕ್ಕೆ ತಿದ್ದುಪಡಿ ಮಾಡಲಾಗಿದ್ದು, ಉಲ್ಲೇಖ (3)ರ ಈ ಕಛೇರಿ ಪತ್ರ ದಿನಾಂಕ 15.04.2024ನ್ನು ಮುಂದುವರಿಸುತ್ತ, ಅದರ ಪ್ರಮುಖ ಅಂಶಗಳನ್ನು ಮತ್ತೊಮ್ಮೆ ನಮೂದಿಸಿದೆ.

1. ರೈತರು ತಮ್ಮ ಸ್ವಂತ ಜಮೀನಿನಲ್ಲಿ ಬೆಳೆದ ಶ್ರೀಗಂಧ ಮರಗಳನ್ನು ಸರ್ಕಾರಿ ಶ್ರೀಗಂಧ ಕೋಠಿ, ಮೈಸೂರು, ಶಿವಮೊಗ್ಗ ಮತ್ತು ಧಾರವಾಡ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಬೆಂಗಳೂರು ಮತ್ತು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಬೆಂಗಳೂರು ಸಂಸ್ಥೆಗಳಲ್ಲದೇ ಇತರೆ ಯಾರಿಗಾದರೂ (any other entity) ಮಾರಾಟ ಮುಕ್ತವಾಗಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ.
2. ರೈತರು ತಮ್ಮ ಹಿಡುವಳಿ ಜಮೀನಿನಲ್ಲಿ ಬೆಳೆದಿರುವ ಶ್ರೀಗಂಧ ಮರಗಳ ವಿವರಗಳನ್ನು ಪಹಣಿ (RTC)ಯಲ್ಲಿ ದಾಖಲಿಸಿದಲ್ಲಿ ಹಾಗೂ ಹಿಡುವಳಿ ಜಮೀನಿನ ಸುತ್ತಲೂ ಹಿಡುವಳಿ ಜಮೀನಿದ್ದ ಪ್ರಕರಣಗಳಲ್ಲಿ, ಕಂದಾಯ ಇಲಾಖೆಯ ಅಭಿಪ್ರಾಯ ಅವಶ್ಯಕತೆ ಇರುವುದಿಲ್ಲ.
3. ರೈತರು ತಾವು ಬೆಳೆದಿರುವ ಶ್ರೀಗಂಧ ಮರಗಳನ್ನು ವಯಸ್ಸಿನ ತಾರತಮ್ಯವಿಲ್ಲದೇ ಕಠಾವಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಇದಲ್ಲದೇ, ಶ್ರೀಗಂಧ ಕುರಿತು ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಅರಣ್ಯ ನಿಯಮಾವಳಿ, 1969ರಲ್ಲಿನ ನಿಯಮಗಳನ್ನು ಮಾಹಿತಿಗಾಗಿ ನಮೂದಿಸಿದೆ.

| ನಿಯಮ | ವಿವರ |
|---|---|
| 108 | ಯಾವುದೇ ಭೂಮಿಯಿಂದ ಶ್ರೀಗಂಧದ ಮರಗಳ ಕಡಿಯುವಿಕೆ ಮತ್ತು ವಿಲೇವಾರಿ ಅದರ ಮಾಲೀಕರು ಹಕ್ಕನ್ನು ಹೊಂದಿರತಕ್ಕದ್ದು. Extraction and disposal of Sandal trees from any land, owners of which possess a right thereto. |
| ಅಧ್ಯಾಯ XIII (ಸಿ) 118 | ಗಂಧದ ಮರಗಳ ಸ್ವಾಧೀನ ಹೊಂದುವಿಕೆ, ಮಾರಾಟ ಮತ್ತು ವಿಭಜನೆ । ಗಂಧದ ಎಣ್ಣೆಯ ಭಟ್ಟೆ ಇಳಿಸುವಿಕೆ ಮತ್ತು ಮಾರಾಟ. Possession, storage, sale and disintegration of sandalwood, distillation and sale of sandalwood oil. |

| | | | |
|---|---|---|---|
| | ಲೈಸೆನ್ಸ್‌ಗಾಗಿ ಅರ್ಜಿ (Application for license) | | |
| | **ಕ್ರ. ಸಂ.** | **ಲೈಸೆನ್ಸಿನ ಸ್ವರೂಪ** | **ಶುಲ್ಕ** |
| | 1. | ಒಂದು ಕ್ವಿಂಟಾಲನ್ನು ಮೀರದಂತಹ ಶ್ರೀಗಂಧದ ಮರವನ್ನು ಸ್ವಾಧೀನ ಹೊಂದಲು ಮತ್ತು ದಾಸ್ತಾನು ಮಾಡಲು | ಯಾವುದೇ ಹಣಕಾಸು ವರ್ಷ ಅಥವಾ ಅದರ ಯಾವುದೇ ಭಾಗಕ್ಕೆ ರೂ. 1,000/– |
| | 2. | ಒಂದು ಕ್ವಿಂಟಾಲನ್ನು ಮೀರಿದಂತಹ ಶ್ರೀಗಂಧದ ಮರವನ್ನು ಹೊಂದಲು ಮತ್ತು ದಾಸ್ತಾನು ಮಾಡಲು | ಯಾವುದೇ ಹಣಕಾಸು ವರ್ಷದಲ್ಲಿ ಅಥವಾ ಅದರ ಯಾವುದೇ ಭಾಗಕ್ಕೆ ರೂ. 5,000/– |
| | 3. | ಶ್ರೀಗಂಧದ ಮರವನ್ನು ಸ್ವಾಧೀನ ಹೊಂದಲು, ದಾಸ್ತಾನು ಮಾಡಲು ಮತ್ತು ಶ್ರೀಗಂಧದ ಮರವನ್ನು ಮಾರಾಟ ಮಾಡಲು ಅಥವಾ ಶ್ರೀಗಂಧದ ಮರದಿಂದ ಎಣ್ಣೆಯನ್ನು ಭಟ್ಟಿ ಇಳಿಸಲು | ಯಾವುದೇ ಹಣಕಾಸು ವರ್ಷದಲ್ಲಿ ಅಥವಾ ಅದರ ಯಾವುದೇ ಭಾಗಕ್ಕೆ ರೂ. 10,000/– |
| | 4. | ಶ್ರೀಗಂಧದ ಮರವನ್ನು ವಿಭಜಿಸುವ ಉದ್ದೇಶದಿಂದ ವಿಭಜಕವನವನಾಗಲೀ ಅಥವಾ ಇತರ ಯಾವುದೇ ಯೋಜನೆಯನ್ನಾಗಲೀ ಹೊಂದುವ ಸಲುವಾಗಿ | ಯಾವುದೇ ಹಣಕಾಸು ವರ್ಷದಲ್ಲಿ ಅಥವಾ ಅದರ ಯಾವುದೇ ಭಾಗಕ್ಕೆ ರೂ. 5,000/– |
| | 5. | ಶ್ರೀಗಂಧದ ಮರದ ಮೂಲಕ ಎಣ್ಣೆಯನ್ನು ಭಟ್ಟಿ ಇಳಿಸುವ ಸಲುವಾಗಿ ಭಟ್ಟಿಮನೆ ಅಥವಾ ಸ್ಥಾವರವನ್ನು ನಡೆಸಲು | ಯಾವುದೇ ಹಣಕಾಸು ವರ್ಷದಲ್ಲಿ ಅಥವಾ ಅದರ ಯಾವುದೇ ಭಾಗಕ್ಕೆ ರೂ. 50,000/– |
| | 6. | ನಿಯಮ 118ರ ಉಪ–ನಿಯಮ (2) ರಡಿಯಲ್ಲಿ ಹಾನಿಗೊಳಗಾದ ಅನುಪಯುಕ್ತವಾದ ಲೈಸೆನ್ಸಿನ ಬದಲಾಗಿ ಲೈಸನ್ಸಿನ ನಕಲನ್ನು ವಿತರಿಸುವ ಸಲುವಾಗಿ ಶುಲ್ಕ | ಪ್ರತಿ ಸಮಯದಲ್ಲಿಯೂ ಪ್ರತಿ ಲೈಸೆನ್ಸಿಗೆ ರೂ.1000/– |
| **155** | ಗಂಧದ ಮರದ ಸಾಗಾಣಿಕೆಗಾಗಿ ಪಾಸುಗಳು (Passes for transport of sandalwood) | | |
| **156** | ರಾಜ್ಯದೊಳಗೆ ಅಥವಾ ರಾಜ್ಯದಿಂದ ಹೊರಗೆ ಗಂಧದ ಮರದ ಸಾಗಣೆ (Transport of sandalwood into or outside the State) | | |
| **157** | ಶ್ರೀಗಂಧದ ಮರಗಳಿಗೆ ಸಂಬಂಧಿಸಿದಂತೆ ಆಸ್ತಿ ಗುರುತುಗಳ ನೋಂದಣಿ (Registration of property mark relating to sandalwood) | | |

ರೈತರು ತಮ್ಮ ಸ್ವಂತ ಜಮೀನಿನಲ್ಲಿ ಬೆಳೆದ ಶ್ರೀಗಂಧ ಮರಗಳನ್ನು ಕತ್ತಾವಣೆ ಮಾಡಲು ಹಾಗೂ ಸಾಗಾಣಿಕೆ ಮಾಡಲು ಪ್ರಾದೇಶಿಕ ವಲಯದ ವ್ಯಾಪ್ತಿಯ ವಲಯ ಅರಣ್ಯ ಅಧಿಕಾರಿಯವರ ಕಛೇರಿ ಅಥವಾ ಪ್ರಾದೇಶಿಕ ವಿಭಾಗ ವ್ಯಾಪ್ತಿಯ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿಯಲ್ಲಿ ಸಲ್ಲಿಸಲಾಗುವ ಅರ್ಜಿಗಳು ವಿಳಂಬವಾಗಿ ವಿಲೇ ಆಗುತ್ತಿದೆ ಎಂಬ ಆರೋಪಗಳು ಈ ಕಛೇರಿಯಲ್ಲಿ ಕೇಳಿಬರುತ್ತಿವೆ.

ಶ್ರೀಗಂಧ ಮರಗಳ ಕತ್ತಾವಣೆ, ಸಾಗಾಣಿಕೆ ಮಾತ್ರವಲ್ಲದೇ ಇತರೆ ಯಾವುದೇ ಸೇವೆಗೆ ಸಂಬಂಧಿಸಿದಂತೆ, ರೈತರು ಅರ್ಜಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಆದ್ಯತೆಯ ಮೇರೆಗೆ ನಿಯಮಾನುಸಾರ ಪರಿಶೀಲಿಸಿ ಎಲ್ಲಾ ದಾಖಲಾತಿಗಳು ಸರಿ ಇದ್ದ ಸಂದರ್ಭದಲ್ಲಿ, ತಡ ಮಾಡದೇ ಅನುಮತಿ ಅಥವಾ ಪರವಾನಗಿಯನ್ನು ನೀಡಲು ಸೂಚಿಸಿದೆ. ಒಂದು ವೇಳೆ, ಅರ್ಜಿದಾರರು ಸಲ್ಲಿಸಿದ ಅರ್ಜಿಯಲ್ಲಿ ದಾಖಲಾತಿಗಳ ಕೊರತೆ ಇದ್ದಲ್ಲಿ, ಸದರಿ ದಾಖಲಾತಿಗಳ ವಿವರಗಳನ್ನು ನಮೂದಿಸಿ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡಲು ಅಗತ್ಯ ಕ್ರಮ ಕೈಗೊಳ್ಳುವುದು.

**ಮೇಲೆ ನಮೂದಿಸಿದ ನಿಯಮಗಳನ್ವಯ ಅಗತ್ಯ ಕ್ರಮ ತೆಗೆದುಕೊಳ್ಳುವುದು ಹಾಗೂ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.**

ಆದಾಗ್ಯೂ, ಶ್ರೀಗಂಧ ಕುರಿತು ಅರ್ಜಿದಾರರು ಸಲ್ಲಿಸುವ ಅರ್ಜಿಗಳನ್ನು ವಿಲೇ ಮಾಡಲು ವಿನಾ ಕಾರಣ ವಿಳಂಬ ಮಾಡಿದಲ್ಲಿ, ಸಂಬಂಧಪಟ್ಟ ಅಧಿಕಾರಿ ಅಥವಾ ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲು ಎಲ್ಲಾ ಪ್ರಾದೇಶಿಕ ವೃತ್ತಗಳ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ / ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸೂಚಿಸಿದೆ.

Digitally signed by
Meenakshi Negi
Date: 09-06-2025
13:19:45

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

## ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ (ನೋಂ.) – ಆಡಳಿತ ಮಂಡಳಿ

| ಕ್ರ.ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಎನ್.ಡಿ. ತಿವಾರಿ | ಅಧ್ಯಕ್ಷರು | 94483 60161 |
| 2 | ಡಾ. ಎಸ್.ಸಿ.ವಿ. ರೆಡ್ಡಿ | ಸಹ ಅಧ್ಯಕ್ಷರು | 98806 46274 |
| 3 | ಡಾ. ಎಸ್. ರಾಜೇಂದ್ರ ಪ್ರಸಾದ್ | ಉಪಾಧ್ಯಕ್ಷರು | 94528 83308 |
| 4 | ಡಾ. ಎಸ್. ರಮೇಶ್ | ಕಾರ್ಯದರ್ಶಿ | 94480 76969 |
| 5 | ಶಿವರಾಜು ಎನ್ | ಜಂಟಿ ಕಾರ್ಯದರ್ಶಿ | 94826 47448 |
| 6 | ಎ. ಅಶ್ವಥಯ್ಯ | ಖಜಾಂಚಿ | 94481 85009 |
| 7 | ಡಾ. ಎ.ಬಿ. ಪಾಟೀಲ | ಸದಸ್ಯರು | 97401 82990 |
| 8 | ಡಾ. ಜಿ.ಕೆ. ವಸಂತಕುಮಾರ್ | ಸದಸ್ಯರು | 98440 85405 |
| 9 | ಡಾ. ಅನಿತಾ ಸದಾಶಿವಯ್ಯ | ಸದಸ್ಯರು | 96201 01012 |
| 10 | ಎ.ಸಿ. ಕೇಶವಮೂರ್ತಿ | ಸದಸ್ಯರು | 99450 86622 |
| 11 | ಸಿದ್ದೇಗೌಡ | ಸದಸ್ಯರು | 94492 44323 |
| 12 | ಮೋಹನ್ ಹೆಚ್.ಪಿ. | ಸದಸ್ಯರು | 98455 17710 |
| 13 | ಶ್ರೀನಿವಾಸ ಪಟೇಲ್ | ಸದಸ್ಯರು | 98454 70007 |
| 14 | ಡಾ. ಎಂ. ಮಹದೇವ ಮೂರ್ತಿ | ನಾಮ ನಿರ್ದೇಶನ ಸದಸ್ಯರು | 98455 88203 |
| 15 | ಆರ್. ಆಂಜನೇಯ ರೆಡ್ಡಿ | ನಾಮ ನಿರ್ದೇಶನ ಸದಸ್ಯರು | 93438 70009 |
| 16 | ಪ್ರತಾಪ್ ಹೆಗಡೆ | ಸಹ ಸದಸ್ಯರು | 98860 27377 |
| 17 | ಡಾ. ಟಿ.ಆರ್. ಗುರುಪ್ರಸಾದ್ | ಸಹ ಸದಸ್ಯರು | 94800 85966 |
| 18 | ಡಾ. ಚಂದ್ರಶೇಖರ್ ಬಿರಾದಾರ್ | ಸಹ ಸದಸ್ಯರು | 73191 32666 |
| 19 | ಜಿ.ಯು. ಶಂಕರ್ | ಸಹ ಸದಸ್ಯರು | 94482 44149 |

## ಜುಲೈ–ಸೆಪ್ಟೆಂಬರ್ 2025 ರ ಮಾಹೆಗಳಲ್ಲಿ ನಡೆದ ಕಾರ್ಯಕ್ರಮಗಳು

1) ದಿನಾಂಕ: 02–07–2025 ರಂದು ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರಿನ ಕಾರ್ಯಕಾರಿ ಸಮಿತಿ ಸದಸ್ಯರ ತಂಡ ಹಾಗೂ ಸದಸ್ಯರಾದ ಡಾ. ಎನ್.ಸಿ. ಪಟೇಲ್ ಮತ್ತು ರೈತರೊಂದಿಗೆ ಕೃಷಿಅರಣ್ಯ ಕ್ಷೇತ್ರ – ಚಂದನವನ ಫಾರಂ, ರಾವುತನಹಳ್ಳಿ, ಬೆಂಗಳೂರು ಇಲ್ಲಿಗೆ ಭೇಟಿ ನೀಡಲಾಯಿತು. ಚಂದನವನ ಫಾರಂನ ಮಾಲೀಕರಾದ ಶ್ರೀ ಕೆಂಪ ಹನುಮಯ್ಯ ಇವರೊಡನೆ ಕ್ಷೇತ್ರವನ್ನು ವೀಕ್ಷಿಸಿ ಅವರ ಕೃಷಿಅರಣ್ಯ ಅನುಭವಗಳನ್ನು ಕೇಳಿ ತಿಳಿಯಲಾಯಿತು. ಈ ಫಾರಂ ಅನ್ನು ಸುಮಾರು 25 ವರ್ಷಗಳಿಂದ ಅಭಿವೃದ್ಧಿಪಡಿಸಿರುವುದಾಗಿ ತಿಳಿಸುತ್ತಾ ತೋಟಗಾರಿಕೆ, ಅರಣ್ಯ ಮರಗಳನ್ನು ಕಾಲಾನುಕ್ರಮದಲ್ಲಿ ನೆಟ್ಟು ಪೋಷಿಸಿರುವುದಾಗಿ ತಿಳಿಸಿದರು. ಇಲ್ಲಿ ನುಗ್ಗೆ, ಸಪೋಟ, ಸೀತಾಫಲ, ಮಾವು, ಹಲಸು, ತೆಂಗು, ಸರ್ವೆ, ತೇಗ, ರಕ್ತ ಚಂದನ, ಶ್ರೀಗಂಧ, ಬೇವು, ಆಸ್ಟ್ರೇಲಿಯನ್ ಮಹಾಗನಿ ಇತ್ಯಾದಿ ಮರಗಳನ್ನು ಬೆಳೆಯಲಾಗಿರುತ್ತದೆ.
2) ದಿನಾಂಕ: 04–09–2025 ರಂದು ಕಾರ್ಯಕಾರಿ ಸಮಿತಿ ಸಭೆಯನ್ನು ನಡೆಸಲಾಯಿತು.

– ಕಾರ್ಯದರ್ಶಿಗಳು



## ಕೃಷಿಅರಣ್ಯ ಕ್ಷೇತ್ರ ಭೇಟಿ – ಚಂದನವನ ಫಾರಂ, ರಾವುತನಹಳ್ಳಿ, ಬೆಂಗಳೂರು. ದಿ: 02–07–2025

ಕೃಷಿಅರಣ್ಯ ರೈತರ ಮತ್ತು ತಂತ್ರಜ್ಞರ ಸಂಸ್ಥೆ, ಬೆಂಗಳೂರಿನ ಕಾರ್ಯಕಾರಿ ಸಮಿತಿ ಸದಸ್ಯರ ತಂಡ ಹಾಗೂ ಡಾ. ಎನ್.ಸಿ. ಪಟೇಲ್ ಮತ್ತು ರೈತರೊಂದಿಗೆ ಕೃಷಿಅರಣ್ಯ ಕ್ಷೇತ್ರ – ಚಂದನವನ ಫಾರಂ, ರಾವುತನಹಳ್ಳಿ, ಬೆಂಗಳೂರು ಇಲ್ಲಿಗೆ ದಿ: 02–07–2025 ರಂದು ಭೇಟಿ ನೀಡಲಾಯಿತು. ಚಂದನವನ ಫಾರಂನ ಮಾಲೀಕರಾದ ಶ್ರೀ ಕೆಂಪ ಹನುಮಯ್ಯ ಇವರೊಡನೆ ಅವರ ಕೃಷಿಅರಣ್ಯ ಅನುಭವಗಳನ್ನು ಕೇಳಿ ತಿಳಿಯಲಾಯಿತು. ಈ ಫಾರಂ ಅನ್ನು ಸುಮಾರು 25 ವರ್ಷಗಳಿಂದ ಅಭಿವೃದ್ಧಿಪಡಿಸಿರುವುದಾಗಿ ತಿಳಿಸುತ್ತಾ ತೋಟಗಾರಿಕೆ, ಅರಣ್ಯ ಮರಗಳನ್ನು ಕಾಲಾನುಕ್ರಮದಲ್ಲಿ ನೆಟ್ಟು ಪೋಷಿಸಿರುವುದಾಗಿ ತಿಳಿಸಿದರು. ಇಲ್ಲಿ ನುಗ್ಗೆ, ಸಪೋಟ, ಸೀತಾಫಲ, ಮಾವು, ಹಲಸು, ತೆಂಗು, ಸರ್ವೆ, ತೇಗ, ರಕ್ತ ಚಂದನ, ಶ್ರೀಗಂಧ, ಬೇವು, ಆಸ್ಟ್ರೇಲಿಯನ್ ಮಹಾಗನಿ ಇತ್ಯಾದಿ ಮರಗಳನ್ನು ಬೆಳೆದಿರುತ್ತಾರೆ. ಕೃಷಿ ಮಾಡಲು ಕೆಲಸಗಾರರ ಕೊರತೆಯು ಇದ್ದು ಅದಕ್ಕಾಗಿ ಕೃಷಿಅರಣ್ಯವನ್ನು ಕೈಗೊಂಡಿದ್ದಾಗಿ ತಿಳಿಸಿದರು. ಹಾಗೆಯೇ ಬೆಂಗಳೂರಿನ ಸಮೀಪದಲ್ಲಿರುವ ಕೃಷಿ ಭೂಮಿಯಲ್ಲಿ ಕೃಷಿಅರಣ್ಯ ಕೈಗೊಂಡಿರುವುದದಲ್ಲದೇ ಅದರಲ್ಲಿ ಪರಿಸರ ಪ್ರವಾಸೋದ್ಯಮವನ್ನು ಕೈಗೊಂಡಿದ್ದಾರೆ. ಇತ್ತೀಚೆಗೆ ಬೇವು, ತೇಗ ಮರಗಳನ್ನು ಮಾರಿ ಸುಮಾರು 12 ರಿಂದ 13 ಲಕ್ಷಗಳ ಆದಾಯವನ್ನು ಪಡೆದಿರುವುದಾಗಿ ತಿಳಿಸಿದರು. ಅಲ್ಲದೆ ಮಾವು, ಹಲಸು ಇತ್ಯಾದಿ ತೋಟಗಾರಿಕಾ ಬೆಳೆಗಳಿಂದಲೂ ಆದಾಯವನ್ನು ಪಡೆಯುತ್ತಿರುವುದಾಗಿ ತಿಳಿಸಿದರು.

ಕೃಷಿಅರಣ್ಯ ಕೈಗೊಳ್ಳುವ ರೈತರಿಗೆ ಸಂಬಂಧಿತ ಇಲಾಖೆಗಳು ನೀಡುವ ಸಸ್ಯಗಳ ಗುಣಮಟ್ಟವನ್ನು ಹೆಚ್ಚಿಸುವುದು ಅತ್ಯಂತ ಅವಶ್ಯಕವಾಗಿರುವುದಾಗಿ ತಿಳಿಸುತ್ತಾ ಇಲಾಖೆಗೆ ತಮ್ಮ ನೆಡುತೋಪುಗಳಿಗೆ ಬೆಳೆಸುವ ರೀತಿಯಲ್ಲೇ ಗುಣಮಟ್ಟದ ಸಸ್ಯಗಳನ್ನು ನೀಡಲು ಸಂಸ್ಥೆಯ ವತಿಯಿಂದ ಇಲಾಖೆಗೆ ಕೋರಲು ತಿಳಿಸಿದರು.

ಕೃಷಿಅರಣ್ಯ ಕ್ಷೇತ್ರವನ್ನು ವೀಕ್ಷಿಸುತ್ತಾ ಕೆಲವೊಂದೆಡೆ ಮರಗಳ ಸಾಂದ್ರತೆ ಹೆಚ್ಚಾಗಿದ್ದು ಶ್ರೀಗಂಧ ಹಾಗೂ ಇತರೆ ಮರಗಳಿಗೆ ನೆರಳು ಹೆಚ್ಚಾಗಿ ಬೆಳವಣಿಗೆ ಕುಂಠಿತವಾಗುವುದರಿಂದ ಅಗತ್ಯವಾದ ಥಿನ್ನಿಂಗ್ ಕೈಗೊಳ್ಳಲು ತಿಳಿಸಲಾಯಿತು ಹಾಗೂ ಮರಗಳಿಗೆ ಪ್ರೂನಿಂಗ್ ಮಾಡುವಾಗ ಎಚ್ಚರಿಕೆಯಿಂದ ಇರುವುದು ಕೊಂಬೆಗಳನ್ನು ಕೆಳಗಡೆಯಿಂದ ಕತ್ತರಿಸಿ ತೆಗೆಯುವುದರ ಕುರಿತು ತಿಳುವಳಿಕೆ ನೀಡಲಾಯಿತು. ಇಂದಿನ ದಿನಗಳಲ್ಲಿ ಜಾಗತಿಕ ಹವಾಮಾನ ಬದಲಾವಣೆಯಂತಹ ಪರಿಸರ ಸಮಸ್ಯೆಗಳಿಂದ ಅತೀವೃಷ್ಟಿ–ಅನಾವೃಷ್ಟಿಯಿಂದಾಗಿ ಬೆಳೆ ನಷ್ಟದಿಂದಾಗಿ ಸಮಸ್ಯಗಳನ್ನು ಅನುಭವಿಸುವುದರಿಂದ ರೈತರು ಏಕಬೆಳೆ ಪದ್ಧತಿಯಿಂದ ಕೃಷಿಅರಣ್ಯ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಸೂಕ್ತವಾಗಿರುತ್ತದೆ ಎಂಬುದನ್ನು ಶ್ರೀ ಕೆಂಪ ಹನುಮಯ್ಯರವರು ತಿಳಿಸಿದರು. ಅವರು ತಮ್ಮ ಅನುಭವದಲ್ಲಿ ಅರಣ್ಯೀಕರಣದಲ್ಲಿ ತೊಡಗಿಸಿಕೊಳ್ಳುವುದರಿಂದ ಹೆಚ್ಚಿನದಾಗಿ ಆರೋಗ್ಯ ಪ್ರಯೋಜನಗಳನ್ನು ಪಡೆದಿರುವ ಬಗ್ಗೆ ತಿಳಿಸಿದರು. ಅಲ್ಲದೆ ಪರಿಸರಕ್ಕೆ ತಮ್ಮ ಅಲ್ಪ ಸೇವೆಯ ಬಗ್ಗೆ ಹೆಮ್ಮೆಯ ಭಾವನೆಯನ್ನು ವ್ಯಕ್ತಪಡಿಸಿದರು.

ಅರಣ್ಯ ಇಲಾಖೆಯು ಬೀಜ ಉತ್ಪತ್ತಿ ಮಾಡುವ ಹಾಗೂ ಹಣ್ಣು ನೀಡುವ ಮರಗಳನ್ನು ಸಸ್ಯಕ್ಷೇತ್ರಗಳಲ್ಲಿ ಬೆಳೆಸಿ ನೀಡುವುದು ಸೂಕ್ತ ಹಾಗೂ ಇಂತಹ ಮರಗಳನ್ನು ಬೆಳೆಯಲು ಸರ್ಕಾರ ಅಗತ್ಯವಾದ ಕಾನೂನು ಬದಲಾವಣೆಗಳನ್ನು ಮಾಡಿ ಪ್ರೋತ್ಸಾಹಿಸಲು ಕೋರುವಂತೆ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು. ಇದರ ಕುರಿತು ಸಂಸ್ಥೆಯು ಶಿಫಾರಸ್ಸನ್ನು ಸಲ್ಲಿಸಲು ತೀರ್ಮಾನಿಸಲಾಯಿತು. ಇದು ರೈತ ಸಮುದಾಯಕ್ಕೆ ಹೆಚ್ಚಿನ ಅನುಕೂಲವಾಗುವುದೆಂದು ತಿಳಿಸಿದರು. ಹಾಗೆಯೇ ಉತ್ತಮ ಗುಣಮಟ್ಟದ ಸಸಿಗಳನ್ನು ಪೂರೈಸುವ ಕುರಿತಂತೆ ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆಯಲು ರೈತರು ಕೋರಿದ್ದರು, ಅದರಂತೆ ಪತ್ರ ಬರೆಯಲಾಗಿರುತ್ತದೆ.

ಶ್ರೀ ಕೆಂಪ ಹನುಮಯ್ಯರವರನ್ನು ಸಂಸ್ಥೆಯ ವತಿಯಿಂದ ಅಭಿನಂದಿಸಿ ಕೇತ್ರ ಭೇಟಿಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

– ಡಾ. ಎಸ್. ರಮೇಶ್, ಭಾ.ಅ.ಸೇ (ನಿ), ಕಾರ್ಯದರ್ಶಿಗಳು



**ಶ್ರೀ ಕೆಂಪ ಹನುಮಯ್ಯರವರನ್ನು ಸಂಸ್ಥೆಯ ವತಿಯಿಂದ ಗೌರವಿಸಲಾಯಿತು.**